ಜನಪದ ವಿಚಾರ

ಬೆಲೆ ೧೮-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೭ ಜುಲೈ-೨೦೦೭ ಸಂಚಿಕೆ-೧೨



ಆವರಣ- ಅನಾವರಣ ಪರ್ಯಾವರಣ

ಜನಪದ ವಿಚಾರದಲ್ಲಿ

ಜುಲೈ-೨೦೦೭

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಜುಲೈ-೨೦೦೭
ಸಂಪುಟ-೭
ಸಂಚಿಕೆ-೧೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್ ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☎ ೦೮೨೩೭ ೨೯೮೭೪೮
e-mail - janapada@yahoo.com

ಹಸಿವು

ಹಸಿವಿನ ಮೇಲೆ ಕವಿತೆ ಬರೆಯಲು ಕೂತೆ
ಹಸಿವೇ ಎದರು ಬಂದು ನಿಂತಂತಾಯಿತು
ಏನೆಂದು ವರ್ಣಿಸುವೆ ನನ್ನ ಮುತ್ತು
ಮಾಣಿಕ್ಯ ಚಿನ್ನ ರನ್ನ
ಹೇಮಾ ವೈಜಯಂತಿ ಜೂಹೀಚಾವ್ಲಾ
ಅಥವಾ
ಸ್ಮಿತ ಹಾಸ್ಯದ ಮೋನಾಲೀಸಾ ಕೇಳಿತು
ಹಸಿವು
ಮೈಯಲ್ಲಿಯ ಕಸುವೇ ಕರಗಿದಂತಾಗಿ
ಕಾಗದ ಪೆನ್ನ ಕೈಯಿಂದ ಹಾರಿ
ಕೆಳಜಾರಿದಂತಾಯಿತು
ನಕ್ಕಿತು ಹಸಿವು : ನಾನಿರುವುದು ಎಲ್ಲರ
ಹೊಟ್ಟೆಯಲಿ
ಎಲ್ಲರೂ ನನಗೆ ಗುಲಾಮರು ನಾನಿ ಲ್ಲದಿದ್ದರೆ
ಜಗತ್ತೇ ಇಲ್ಲ
ಇಡೀ ಜೀವಿಗಳಿಗೆ ನಾನೇ ಧಣಿ ದಂಗೆ
ಎಬ್ಬಿಸುವೆ ನಾನು
ಯುದ್ಧಗಳ ಮಾಡಿಸುವೆ ಬಂದೂಕಿನ
ಬಾಯಿಗೆ ಮಕ್ಕಳನ್ನು ಕಟ್ಟಿ
ಎಲ್ಲೆಂದರಲ್ಲಿ ಅವುಗಳನ್ನು ಹೂಳಿಬಿಡುವೆ
ಹೀಗೆನ್ನುತ್ತ ಅಲ್ಲಿಂದ ಸರಿದ ಹಸಿವು
ಸಾವಕಾಶ
ಸಾವಕಾಶವಾಗಿ ನನ್ನೊಳಗೆ
ತೂರಿಕೊಳ್ಳಲಾರಂಭಿಸಿತು
ಅಸಾಧ್ಯ ಹಸಿವಾಗಿ ಕವಿತೆ ಬರೆವುದ ಬಿಟ್ಟು
ರೊಟ್ಟಿ ಹುಡುಕಲು ಆರಂಭಿಸಿದೆ.

- ಸರಜೂ ಕಾಟ್ಕರ್

ವಿಚಾರ ದೀಪ್ತಿ

ಇತ್ತೀಚಿಗೆ ಕರ್ನಾಟಕ ವಿಧಾನಸಭೆ ಆತುರಾತುರವಾಗಿ ೧೯೯೩ರ ಕರ್ನಾಟಕ ಪಂಚಾಯತ್ ರಾಜ್ ಕಾನೂನಿಗೆ ಒಂದು ತಿದ್ದುಪಡಿಯನ್ನು ತರುವುದರ ಮೂಲಕ ವಾರ್ಡ್ ಸಭೆಗಳು ಮತ್ತು ಗ್ರಾಮಸಭೆಗಳು ಸರ್ಕಾರದ ಗ್ರಾಮೀಣ ಕಲ್ಯಾಣ ಯೋಜನೆಗಳಿಗೆ ಪಾತ್ರರಾಗುವ ಫಲಾನುಭವಿಗಳ ಆಯ್ಕೆಯ ಅಧಿಕಾರವನ್ನು ಕಿತ್ತುಕೊಂಡು, ಶಾಸಕರು ಮುಖ್ಯಸ್ಥರಾಗಿರುವ ಸಮಿತಿಗೆ ಆ ಆಯ್ಕೆಯ ಅಧಿಕಾರವನ್ನು ಕೊಟ್ಟಿತು. ಈ ಕ್ರಮಕ್ಕೆ ಪಂಚಾಯತ್‌ರಾಜ್ ಸಂಸ್ಥೆಗಳಿಂದಲೂ ಮತ್ತು ಅನೇಕ ಸರ್ಕಾರೇತರ ಸಂಸ್ಥೆಗಳಿಂದಲೂ ಹಾಗೂ ಪ್ರಜಾಸತ್ತಾತ್ಮಕ ವಿಕೇಂದ್ರಿಕರಣಕ್ಕೆ ಬದ್ಧರಾದ ಜನರಿಂದಲೂ ಪ್ರತಿಭಟನೆಗಳು ಬಂದವು. ಇತ್ತೀಚಿಗೆ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡುತ್ತಾ ಕೇಂದ್ರ ಸರ್ಕಾರದಲ್ಲಿ ಪಂಚಾಯತ್ ರಾಜ್ ಖಾತೆಯ ಮಂತ್ರಿಯಾಗಿರುವ ಮಣಿಶಂಕರ್ ಅಯ್ಯರ್ ಅವರು ಈ ರೀತಿ ಹೇಳಿದರು "ಶಾಸಕರು ಪಂಚಾಯತ್ ರಾಜ್ ಸಂಸ್ಥೆಗಳೊಂದಿಗೆ ಅಧಿಕಾರವನ್ನು ಹಂಚಿಕೊಳ್ಳವುದಕ್ಕೆ ಇಚ್ಛಿಸುತ್ತಿಲ್ಲವಷ್ಟೆ ಅಲ್ಲ ಅವರು ಆ ಸಂಸ್ಥೆಗಳ ಬಗ್ಗೆ ಭೀತಿ ಹೊಂದಿದ್ದಾರೆ. ಕರ್ನಾಟಕದ ಶಾಸಕರು ಈ ಮಾತಿಗೆ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಒದಗಿಸಿದ್ದಾರೆ. ಅವರು ಪದೇ ಪದೇ ಆಗ್ರಹಿಸಿ ಶಾಸಕರೆ ಫಲಾನುಭವಿಗಳ ಆಯ್ಕೆಯ ಸಮಿತಿಯ ಅಧ್ಯಕ್ಷರಾಗಿರಬೇಕೆಂದು ಹೇಳಿದ್ದಾರೆ ಅದರಲ್ಲಿ ಮುಖ್ಯವಾಗಿ ಆಶ್ರಯ ವಸತಿ ಯೋಜನೆಯ ಫಲಾನುಭವಿಗಳನ್ನು. ಪಂಚಾಯತ್‌ರಾಜ್ ಸಂಸ್ಥೆಯ ಮೂಲಕ ಆಯ್ಕೆಯಾಗಿ ಬಂದಿರುವ ಪ್ರತಿನಿಧಿಗಳಲ್ಲಿ ಶಾಸಕರು ಪಂಚಾಯತ್ ರಾಜ್ ಸಭೆಗಳಲ್ಲಿ ಭಾಗವಹಿಸುವುದರ ಬಗ್ಗೆಯೆ ಬಹಳಷ್ಟು ಅಸಂತೋಷವಿದೆ. ಶಾಸಕರು ಈ ಸಭೆಗಳ ನಡಾವಳಿಕೆಗಳನ್ನು ನಿಯಂತ್ರಿಸುತ್ತಾರಷ್ಟೆ ಅಲ್ಲ ಕೆಲವೊಂದು ಸಲ ಅವು ಹೀಗೇ ಇರಬೇಕೆಂದು ಸೂಚಿಸುತ್ತಾರೆ. ಸ್ಥಳೀಯ ಶಾಸಕರು ಫಲಾನುಭವಿಗಳ ಹೆಸರುಗಳನ್ನು ಬರೆಸುವುದರೊಂದಿಗೆ ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಆ ಹೆಸರುಗಳನ್ನು ಸರ್ಕಾರಕ್ಕೆ ಕಳುಹಿಸಬೇಕೆಂದು ಒತ್ತಾಯಿಸುತ್ತಾರೆ. ಶಾಸಕರ ಮತ್ತು ಪಂಚಾಯತ್ ರಾಜ್ ಪ್ರತಿನಿಧಿಗಳ ಕರ್ತವ್ಯಗಳು ಮತ್ತು ಆಡಳಿತ ವ್ಯಾಪ್ತಿಯನ್ನು ನಿರ್ಧರಿಸುವ ಸಮಯ ಬಂದಿದೆ. ಮಣಿಶಂಕರ್ ಅಯ್ಯರ್ ರವರ ಪ್ರಕಾರ ಶಾಸಕರ ಕರ್ತವ್ಯ ಶಾಸನವನ್ನು ಮಾಡುವುದುಗಿದ್ದರೆ ಪಂಚಾಯತ್ ಪ್ರತಿನಿಧಿಗಳ ಕೆಲಸ ಕಾರ್ಯಾನ್ವಿತಗೊಳಿಸುವುದು. ಶಾಸಕರೇನಾದರೂ ಯೋಜನೆಗಳ ಅನುಷ್ಠಾನದಲ್ಲಿ ಆಸಕ್ತಿ ಹೊಂದಿದ್ದರೆ ಅವರು ಪಂಚಾಯತಿಗಳ ಚುನಾವಣೆಗೆ ನಿಲ್ಲಬೇಕೆ ಹೊರತು ಶಾಸನ ಸಭೆಗಲ್ಲ. ಶಾಸಕರನ್ನು ಪಂಚಾಯತ್ ಸಂಸ್ಥೆಗಳಿಂದ ದೀರ್ಘಕಾಲ ದೂರವಿಟ್ಟಲ್ಲಿ ಶಾಸಕರಿಗೆ ತಮ್ಮ ನಿಜವಾದ ಪಾತ್ರದ ಅರಿವುಂಟಾಗುವುದು.

– ಬಾಪು ಹೆದ್ದೂರಶೆಟ್ಟಿ

ಆವರಣ - ಅನಾವರಣ - ಪರ್ಯಾವರಣ

- *ಸುರೇಂದ್ರ ಕೌಲಗಿ*

ಎಸ್.ಎಲ್.ಭೈರಪ್ಪನವರ ಬಹು ಇತ್ತೀಚಿಗಿನ ಕೃತಿ 'ಆವರಣ' ಕರ್ನಾಟಕದ ಸಾರಸ್ವತ ಲೋಕದಲ್ಲಿ ಹಾಗು ವೈಚಾರಿಕ ಕ್ಷೇತ್ರದಲ್ಲಿ ಹಾಗೂ ಐತಿಹಾಸಿಕ ಚಿಂತನಾಕ್ಷೇತ್ರದಲ್ಲಿ ಹುಯಿಲೆಬ್ಬಿಸಿದೆ. ಮೊಟ್ಟಮೊದಲನೆಯದಾಗಿ 'ಆವರಣ' ಒಂದು ಕಾದಂಬರಿಯೇ ಅಲ್ಲ. ಅದಕ್ಕೆ ಸಾಹಿತ್ಯಕ ಮನ್ನಣೆಯಿಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ. ಅದೆಲ್ಲಕ್ಕಿಂತ ಹೆಚ್ಚಾಗಿ ಭೈರಪ್ಪನವರು ಸಾಹಿತಿಯಲ್ಲ. ಅವರೇನಿದ್ದರೂ ಓರ್ವ ಚರ್ಚಾಪಟು ಎಂದೂ ಹೇಳಲಾಗುತ್ತಿದೆ.

ಭೈರಪ್ಪನವರ ವ್ಯಾಖ್ಯೆಯ ಪ್ರಕಾರ ಸತ್ಯವನ್ನು ಮರೆಮಾಚುವ ಮಾಯೆಯ ಕಾರ್ಯಕ್ಕೆ ಆವರಣ ಎಂದು ಹೆಸರು. ಮಾಯೆಯ ಮುಸುಕು ಹೊದಿಸುವ ಕಾರ್ಯವನ್ನು ಯಾರು ಮಾಡುತ್ತಾರೆಂಬುದು ಇಲ್ಲಿ ಸ್ಪಷ್ಟವಾಗಿಲ್ಲ. ಆದರೆ ಇಲ್ಲಿ ಮುಖ್ಯವಾಗಿರುವ ಶಬ್ದಗಳು ಆವರಣ,ಮಾಯೆ ಮತ್ತು ಸತ್ಯ. ಈ ಮೂರು ಶಬ್ದಗಳಲ್ಲಿ ಕೊನೆಯವರೆಗೂ ಉಳಿಯುವಂಥಾದ್ದು ಹಾಗೂ ಆವರಣ ಮತ್ತು ಮಾಯೆಯ ಪರದೆಯನ್ನು ಸರಿಸುವಂಥಾದ್ದು ಸತ್ಯ. ಸತ್ಯ ಸೂರ್ಯವಾದರೆ ಆವರಣ ಮತ್ತು ಮಾಯೆ ಕತ್ತಲು. ಭೈರಪ್ಪನವರು ಆವರಣದ ವಿಷಯವನ್ನೆತ್ತಿಕೊಂಡು ಸುತ್ತಿಬಳಸಿ ತಾವು ಸತ್ಯವನ್ನು ಪ್ರತಿಪಾದಿಸುತ್ತಿರುವುದಾಗಿ ಹೇಳಿದ್ದಾರೆ. ಇತ್ತೀಚಗೆ ತಮ್ಮ ಕಾದಂಬರಿಯ ಸುತ್ತ ಉಂಟಾಗಿರುವ ವಿವಾದದ ಆವರಣವನ್ನು ಕಿತ್ತೆಸೆಯುವ ಪ್ರಯತ್ನದಲ್ಲಿ ತಾವು ಕಾದಂಬರಿಕಾರನಿಗಿಂತಲೂ ಸತ್ಯಾನ್ವೇಷಕ ಎಂದು ಘೋಷಿಸಿಕೊಂಡಿದ್ದಾರೆ. ಸತ್ಯವನ್ನು ಪ್ರೀಯವಾಗಿ ಹೇಳಬೇಕೆಂಬುದೂ ಅನಾತನವಾದ ಮಾತು. ಯಾವುದೇ ಒಬ್ಬ ಸಾಹಿತ್ಯ ಸೃಷ್ಟಿಕರ್ತನು ಕಾದಂಬರಿಕಾರನೊ, ಇತಿಹಾಸಿಕಾರನೋ ಅಥವಾ ಕೇವಲ ಸತ್ಯಾನ್ವೇಷಕನೋ ಎಂಬುದನ್ನು ಅಂತಿಮವಾಗಿ ಓದುಗ ತನ್ನ ಮಟ್ಟಿಗೆ ತಾನು ತೀರ್ಮಾನಿಸಿಕೊಳ್ಳುತ್ತಾನೆ. ಆ ಕೃತಿಯಿಂದ ಖುಷಿ ಪಡುವುದು, ಖುಷಿ ಪಡೆಯದೇ ಇರುವುದು, 'ವಿದ್ಯಾವಂತನಾಗುವುದು' 'ಅವಿದ್ಯಾವಂತನಾಗುವುದು' ಆಯಾ ಓದುಗನು ತನ್ನ ವರ್ತಮಾನದಲ್ಲಿ ಹೊಂದಿರುವ ಒಟ್ಟು ಸಂಚಿತ ಅನುಭವವನ್ನು ಮತ್ತು ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ. ಪ್ರತಿಯೊಬ್ಬ ಓದುಗನ ಈ ಒಳ ಆವರಣವನ್ನು ಯಾವ ಸಾಹಿತ್ಯ ಕೃತಿಯಾಗಲೀ, ಯಾವುದೇ ಪ್ರಖರ ಬುದ್ಧಿಜೀವಿಯಾಗಲೀ ಬೇಧಿಸಲಾರ. ಅನುಭವ ನಿತ್ಯವಷ್ಟೇ ಏಕೆ, ಕ್ಷಣಕ್ಷಣ ಚಲನಶೀಲ. ವ್ಯಕ್ತಿ ಎಷ್ಟೇ ವ್ಯಷ್ಟಿಯ ಭಾಗವಾಗಿದ್ದರೂ ಅವನು ಸಮಷ್ಟಿಯಿಂದ ಪ್ರತ್ಯೇಕನೇ. ಅವನ ಶರೀರದಲ್ಲಿರುವ ವಂಶವಾಹಿನಿಯೇ ಬೇರೆ, ಸಮಷ್ಟಿಯ ರಚನಾ ವ್ಯವಸ್ಥೆಯೇ ಬೇರೆ. ವ್ಯಕ್ತಿ ಮತ್ತು ವ್ಯಷ್ಟಿಯನ್ನು ಭಾವನಾ ಪ್ರಪಂಚದಲ್ಲಿ

ಒಂದುಗೂಡಿಸಬಹುದೇ ಹೊರತು ಭೌತಿಕವಾಗಿ ಬೆಸುಗೆ ಮಾಡಲು ಸಾಧ್ಯವಿಲ್ಲ. ಆವರಣವೆಂಬುದು ಅಸತ್ಯದ ಸಂವಾದಿ ಪದ ಎಂದು ಕರೆದರೂ ಅಸತ್ಯದ ಅಸ್ತಿತ್ವ ಸತ್ಯವನ್ನೇ ಅವಲಂಬಿಸಿದೆ. ಸತ್ಯ ಇದ್ದರೆ ಅಸತ್ಯದ ಮಾತು ಬರುತ್ತದೆ. ಕೇವಲ ಅಸತ್ಯವೇ ಇರುವಲ್ಲಿ ಅಸತ್ಯದ ಮಾತು ಬರುವುದಿಲ್ಲ.

ಅಸತ್ಯದ ಆವರಣವನ್ನು ಅನಾವರಣಗೊಳಿಸುವುದೇ 'ಆವರಣ'ದ ಉದ್ದೇಶ್ಯವಾಗಿದ್ದರೆ ಅದನ್ನು ಎಲ್ಲರೂ ಸ್ವಾಗತಿಸಬೇಕು. ಏಕೆಂದರೆ ಯಾರಿಗೆ ತಾನೆ ಸತ್ಯ ಬೇಡ? ಸತ್ಯವನ್ನು ಯಾರಾದರೂ ಬಯಸದೇ ಇರುವಂಥವರು ಇದ್ದರೆ ಅವರು ಮಾನವರಾಗಿರಲಾರರು.

ಆವರಣದ ಪ್ರಶ್ನೆ ಏಕೆ ಉದ್ಭವಿಸುತ್ತದೆ? ಆವರಣದ ನಿರ್ಮಾಣದ ಹಿಂದೆ ಯಾರ ಕೈವಾಡವಿರುತ್ತದೆ?

ಆವರಣದ ಪ್ರಶ್ನೆ ಏಕೆ ಉದ್ಭವಿಸುತ್ತದೆಂದರೆ ಮಾನವ ದೂರದೃಷ್ಟಿಯನ್ನು ಹೊಂದಿರುವುದಿಲ್ಲ. ಸಧ್ಯದ, ಆ ಘಳಿಗೆಯ ಹಿತ ಅವನ ದೂರದೃಷ್ಟಿಯನ್ನು ಮೊಟಕುಗೊಳಿಸುತ್ತದೆ. ಆದ್ದರಿಂದ ಅವನು ತನ್ನ ಸುತ್ತ ಸ್ವಾರ್ಥದ ಆವರಣವನ್ನು ಸ್ವತಃ ರಚಿಸಿಕೊಂಡು ಇನ್ನೊಂದು ಆವರಣದೊಂದಿಗೆ ಘರ್ಷಣೆಯಾಗುವವರೆಗೆ ತನ್ನ ಆವರಣದೊಳಗೆ ಮೋದ-ಪ್ರಮೋದದೊಂದಿಗೆ ಕಾಲ ಕಳೆಯುತ್ತಾನೆ. ಆಗ ಅವನ ಆವರಣ ಕಳಚಿ ನೈಜ ಪರ್ಯಾವರಣವನ್ನು ಅನುಭವಿಸುತ್ತಾನೆ.

ಆವರಣ ಅನಾವರಣಗೊಂಡ ನಂತರ ಮನುಷ್ಯನಿಗೆ ದರ್ಶನವಾಗುವುದು ಪರ್ಯಾವರಣ, ಅಂದರೆ ಅವನ ಸುತ್ತಲಿನ ಭೌತಿಕ ಪರಿಸರ. ಈ ಪರ್ಯಾವರಣ ಕೇವಲ ನೈಸರ್ಗಿಕ ಪರಿಸರವಾಗಿರದೆ ನೈಸರ್ಗಿಕ ಪರಿಸರದೊಂದಿಗೆ ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ, ವೈಚಾರಿಕ ಮತ್ತು ಆರ್ಥಿಕ ಪರಿಸರವೂ ಆಗಿರುತ್ತದೆ. ಈ ಪರಿಸರವೇ ವಾಸ್ತವಿಕವಾಗಿ ಮನುಷ್ಯನ ಕ್ರಿಯೆಯನ್ನು ಪ್ರಭಾವಿತಗೊಳಿಸುತ್ತದೆ. ಭೈರಪ್ಪನವರು ಸೂಚಿಸುವಂಥ ಆವರಣದ ನಿರ್ಮಾಣಕ್ಕೆ ಕಾರಣವಾಗುತ್ತದೆ. ಪರ್ಯಾವರಣ ಶುದ್ಧವಾಗಿರುವಷ್ಟರ ಮಟ್ಟಿಗೆ ಆವರಣದಲ್ಲಿಯ ಮನುಷ್ಯನ ವಿಚಾರ ಮತ್ತು ಕೃತಿಯೂ ಶುದ್ಧವಾಗಿರುತ್ತದೆ. ಆಗ ಸತ್ಯವನ್ನು ಮರೆಮಾಚುವ ಮಾಯೆ ಇಲ್ಲವಾಗುತ್ತದೆ.

ದಿನ ನಿತ್ಯವೂ ಮನುಷ್ಯ ಮತ್ತು ಸಮಾಜ ತನ್ನ ಸುತ್ತ ಮಾಯೆಯನ್ನು ನಿರ್ಮಿಸಿಕೊಳ್ಳುವುದರಿಂದ ಸತ್ಯದ ಸುತ್ತ ಆವರಣದ ನಿರ್ಮಾಣವಾಗುತ್ತದೆ. ಅಲ್ಲದೆ ಈ ಆವರಣದ ನಿರ್ಮಾಣದ ಸ್ವರೂಪ ಮತ್ತು ಅದರ ಸಾಂದ್ರತೆ ಕಾಲ-ದೇಶ-ವರ್ತಮಾನಕ್ಕನುಗುಣವಾಗಿ ಇರುತ್ತದೆ. ಇಂಗ್ಲೆಂಡ್, ಅಮೇರಿಕಾ, ಇಸ್ರೇಲ್, ಪ್ಯಾಲೆಸ್ಟೈನ್, ಪಾಕಿಸ್ತಾನ, ಅಂಡಮಾನ್ ದ್ವೀಪಗಳು, ಅಫ್ಘಾನಿಸ್ತಾನ ಮುಂತಾದ ದೇಶಗಳಲ್ಲಿಯ ಜನರ ಆವರಣವೇ ಬೇರೆ ತೆರನದ್ದಾಗಿರುತ್ತದೆ. ಭಾರತೀಯರ ಆವರಣವೇ ಬೇರೆತರನದ್ದಾಗಿರುತ್ತದೆ. ಅದರಂತೆ ಸತ್ಯವೂ ಬೇರೆ ತೆರನದ್ದಾಗಿರುತ್ತದೆ. ಈಗ ತಾನೆ ಗಗನಯಾತ್ರೆ ಕೈಗೊಂಡು

ಬಂದ ಸುನೀತಾ ವಿಲಿಯಮ್ಸ್ ತನ್ನ ಸುತ್ತ ನಿರ್ಮಿಸಿಕೊಂಡಿರುವ ಮಾಯೆಯ ಆವರಣ ಮತ್ತು ಅದರಲ್ಲಿಯ ಸತ್ಯ, ನಿರಕ್ಷರಳೂ ದೂರದ ಬಾಹ್ಯ ಸಮಾಜದ ಬಗ್ಗೆ ಅಜ್ಞಾನಿಯೂ ಆಗಿರುವ ಶುದ್ಧ ಗ್ರಾಮೀಣ ಮಹಿಳೆಯೊಬ್ಬಳ ಮಾಯೆ ಮತ್ತು ಆ ಮಾಯೆಯೊಳಗಿನ ಸತ್ಯ ಖಂಡಿತವಾಗಿ ಭಿನ್ನವಾಗಿರುತ್ತದೆ. ಅಷ್ಟೇ ಅಲ್ಲ ಅದು ಅವಿದ್ಯೆಯೂ ಆಗಿರುತ್ತದೆ. ಅದೇ ರೀತಿ ಜಿನ್ನಾ ಮತ್ತು ಗಾಂಧಿ ಧಾರ್ಮಿಕ ವಿಚಾರಗಳ ಬಗ್ಗೆ ಸೃಷ್ಟಿಸಿಕೊಂಡಿದ್ದ ಆವರಣವೇ ಬೇರೆ ಬೇರೆಯಾಗಿದ್ದಿತು. ಆದ್ದರಿಂದಲೇ ಒಬ್ಬರು ಇನ್ನೊಬ್ಬರನ್ನು ನೈಜ ಪರ್ಯಾವರ್ಣದ ಬಗ್ಗೆ ಮನವರಿಕೆ ಮಾಡಿಕೊಡಲು ವಿಫಲವಾದರು. ಪರಿಣಾಮವಾಗಿ ದೇಶ ವಿಭಜಿತಗೊಂಡಿತು. ವಿಲಿಯಮ್ಸ್‌ಳ ಗಗನಯಾತ್ರಾ ಅನುಭವದ ಆಧಾರದ ಮೇಲೆ ಇನ್ನು ಮುಂದೆ ಜಾಗತಿಕ ಮಟ್ಟದಲ್ಲಿ ನಡೆಯುವ ಕ್ರಿಯೆ, ವಿಕ್ಷೇಪವೆಂದೆನಿಸಿಕೊಳ್ಳಬಹುದು. ಈ ವಿಕ್ಷೇಪವು ಇನ್ನು ಮುಂದೆ ತನ್ನೊಳಗಿನ 'ಅಜ್ಞಾನ'ದ ಬಲದಿಂದ ಸಮಸ್ತ ವಿಶ್ವ ಸಮಾಜವನ್ನೂ, ಸಮಾಜದ ಅಭಿವ್ಯಕ್ತಿ ಯನ್ನೂ ನಿರ್ಮಿಸುತ್ತ ಹೊಸ ಆವರಣವನ್ನೇ ಸೃಷ್ಟಿಸಬಹುದು. ಆಗ ಭಾರತದಲ್ಲಿಯ ಭೈರಪ್ಪನಂಥ ಚಿಂತಕರು ಚಿತ್ರಿಸುವ ಆವರಣವು, ಪಾಕಿಸ್ತಾನದಲ್ಲಿಯ ಚಿಂತಕ ಅಥವಾ 'ಇತಿಹಾಸ'ಕಾರ ಚಿತ್ರಿಸುವ ಆವರಣವು ಭಿನ್ನವಾಗಿರುತ್ತದೆ. ಆಗ ಸತ್ಯವನ್ನು ಮರೆಮಾಚುವ ಮಾಯೆಯ ಕಾರ್ಯವಾದ ಆವರಣವೂ, ಅಸತ್ಯವನ್ನು ಬಿಂಬಿಸುವ ಕಾರ್ಯವಾದ ವಿಕ್ಷೇಪಣೆಯೂ ಬೇರೆಯಾಗಿರಲು ಸಾಧ್ಯ. ಅಂದರೆ ಆವರಣ, ಅಸತ್ಯ, ವಿಕ್ಷೇಪ ಈ ಮುಂತಾದ ಪ್ರಕ್ರಿಯೆಗಳೆಲ್ಲ ಇನ್ನಾವುದೋ ಒಂದು ಶಕ್ತಿಗೆ ಒಳಪಟ್ಟಿರುತ್ತದೆ. ಈಗಾಗಲೆ ತಿಳಿಸಿರುವಂತೆ ಆವರಣವನ್ನು ಅನಾವರಣಗೊಳಿಸಿ ನಾವು ಪರ್ಯಾವರಣದೊಳಗೆ ಪ್ರವೇಶಿಸಿದಾಗ ಆ ಬೇರೊಂದು ಶಕ್ತಿಯ ಅನುಭವವಾಗುತ್ತದೆ.ಆ ಪರ್ಯಾವರಣದೊಳಗೇ ಮಾನವನ ಎಲ್ಲ ಇತಿಹಾಸ, ಭೂಗೋಳ, ಗಣಿತ ಎಲ್ಲವೂ ಸಮಾವಿಷ್ಯಗೊಳ್ಳುತ್ತವೆ. ಅಲ್ಲಿ ಯಾವುದಕ್ಕೂ ಪ್ರತ್ಯೇಕವಾದ ಅಸ್ತಿತ್ವವಿರುವುದಿಲ್ಲ. ಒಂದು ವೇಳೆ ಪ್ರತ್ಯೇಕತೆಯ ಅನುಭವವಾದರೆ ಅದಕ್ಕೆ ಕಾರಣ ಭೈರಪ್ಪನವರು ಹೇಳುವಂತೆ ಇತಿಹಾಸಕಾರನೇ ಇತಿಹಾಸವನ್ನು ಕಾಣುವ ಕಣ್ಣಿಗೆ ಅಡ್ಡ ನಿಂತರೆ ಏನು ಎಂಬಂತೆ ಪರ್ಯಾವರಣದಲ್ಲಿಯ ಗಣಿತವನ್ನು ಕಾಣಬೇಕಾದ ಪರ್ಯಾವರಣ ಪ್ರೇಮಿಯೇ ಅಡ್ಡ ನಿಂತರೆ ಪರ್ಯಾವರಣದ ಗತಿ ಏನು?

ಜಗತ್ತಿನ ಎಲ್ಲ ಧರ್ಮಗಳು, ಜಾತಿಗಳು, ವಿಚಾರಗಳು, ಭಾಷೆಗಳು, ಸಂಸ್ಕೃತಿಗಳು, ಮಹಾಪುರುಷರು ಎಲ್ಲ ಬಗೆಯ ಆವರಣದ ಆಚೆಗಿರುವ ಪರ್ಯಾವರಣದ ಕೂಸುಗಳು, ಉತ್ಪತ್ತಿಗಳು. ಪರ್ಯಾವರಣ ಒಂದು ಮಹಾ ಸಾಗರದಂತೆ. ಮನುಷ್ಯ ತನ್ನ ಸುತ್ತ ನಿರ್ಮಿಸಿಕೊಳ್ಳುವ ಆವರಣ ಆ ಮಹಾಸಾಗರದಲ್ಲಿಯ ಒಂದು ಬಿಂದುವಿನಂತೆ. ಆದರೂ ಆ ಮಹಾಸಿಂಧು ಆ ಚಿಕ್ಕ ಬಿಂದುವನ್ನು ಉಪೇಕ್ಷಿಸುವಂತಿಲ್ಲ. ಅಂತೆಯೇ ಆ ಚಿಕ್ಕ ಬಿಂದುವೂ ಸಾಗರವನ್ನು ಉಪೇಕ್ಷಿಸುವಂತಿಲ್ಲ. ಮಹತ್‌ನಲ್ಲಿ ಸಾಮಾನ್ಯ ಅಡಗಿದೆ; ಸಾಮಾನ್ಯದಲ್ಲಿ ಮಹತ್ ಅಡಗಿದೆ. ಒಂದು ಇನ್ನೊಂದರಿಂದ ಬೇರೆಯಾಗಲಾರದು.

ಅವೆರಡರ ಹಿತ ಒಂದುಗೂಡುವುದರಲ್ಲಿಯೇ ಇದೆ. ಇದು ಪರ್ಯಾವರಣದ ಶಾಸ್ತ್ರ ಮತ್ತು ಗಣಿತ. ಆದ್ದರಿಂದ ಆವರಣ ಶಾಶ್ವತವಲ್ಲ; ಶಾಶ್ವತವಾದುದು ಪರ್ಯಾವರಣ. ಆವರಣಕ್ಕೂ ಅನಾವರಣಕ್ಕೂ ಮತ್ತು ಪರ್ಯಾವರಣಕ್ಕೂ ಕಾರಣನಾಗುವ ಆ ಅತಿ ಎತ್ತರದ ಸೂರ್ಯನ ಸ್ಥಾನದಲ್ಲಿದ್ದುಕೊಂಡು ಮಾನವ ಸಮಾಜವನ್ನು ವೀಕ್ಷಿಸಿದರೆ ಸತ್ಯವನ್ನು ಮರೆಮಾಚುವ ಆವರಣ ಆ ಮಾಯೆಯ ಕಾರಣದಿಂದುಂಟಾಗುವ ವಿಕ್ಷೇಪ, ವಿಕ್ಷೇಪದ ಕಾರಣದಿಂದಾಗಿ ವ್ಯಕ್ತಿ ಸಿಲುಕಿಕೊಳ್ಳುವ ಅವಿದ್ಯೆ ಎಲ್ಲವೂ ಕ್ಷಣಭಂಗುರವೆಂದು ಗೊತ್ತಾಗುತ್ತದೆ. ಆದ್ದರಿಂದ ಆಗ ಯಾವುದೇ ಒಬ್ಬ ಮನುಷ್ಯ, ಯಾವುದೇ ಒಂದು ಗುಂಪು, ಸಮಾಜ ತನ್ನ ಸುತ್ತ ನಿರ್ಮಿಸಿಕೊಳ್ಳುವ ಆವರಣವೇ ಎಷ್ಟು ಅಸತ್ಯದಿಂದ ಕೂಡಿದೆ ಎಂದು ಗೊತ್ತಾಗುತ್ತದೆ.

ಎಂಥ ಭಯಂಕರ ಕತ್ತಲೆಯೂ ಸೂರ್ಯ ರಶ್ಮಿಯ ಸ್ಪರ್ಶವಾಗುತ್ತಲೇ ಮಾಯವಾಗುವಂತೆ ವಿವಿಧ ಆಯಾಮಗಳ ಪರ್ಯಾವರಣದ ಇರುವಿಕೆಯ ಜ್ಞಾನ ಮನಷ್ಯನಿಗೆ ಉಂಟಾದರೆ ಭೈರಪ್ಪನವರು ಸೃಷ್ಟಿಸಿದ ಆವರಣವೇ ಆಗಿರಬಹುದು, ಸಲ್ಮಾನ್ ರಷ್ದಿ ಸೃಷ್ಟಿಸಿದ ಸೆಟಾನಿಕ್ ವರ್ಸಸ್ ಆವರಣವೇ ಆಗಿರಬಹುದು, ಯಾವುದೇ ಧರ್ಮದ ಶ್ರೇಷ್ಠತೆಯನ್ನು ಮೆರೆಯುವ ಗ್ರಂಥವಾಗಿರಬಹುದು ಇನ್ನಾವುದೇ ವ್ಯಕ್ತಿಯನ್ನು ವೈಭವಿಕರಿಸುವ 'ಆವರಣ'ವಾಗಿರಬಹುದು. ಅದೆಲ್ಲವೂ ಕಾಲ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿ ಅಂತಿಮವಾಗಿ ಉಳಿಯುವ ಪರ್ಯಾವರಣದಲ್ಲಿ ಸಮಾವೇಶಗೊಳ್ಳುವವು. ಆದ್ದರಿಂದ ಈಗ ಚಿಂತಕರಿಂದ, ಸಾಹಿತಿಗಳಿಂದ, ಚರ್ಚಾಪಟುಗಳಿಂದ, ಇತಿಹಾಸಕಾರರಿಂದ, ಧಾರ್ಮಿಕ ಮುಖಂಡರಿಂದ, ರಾಜಕಾರಣಿಗಳಿಂದ ಬೇಕಾಗಿರುವುದು ಹೊಸ ಹೊಸ ಆವರಣಗಳಾಗಲೀ, ಆವರಣಗಳ ಅನಾವರಣಗಳಾಗಲೀ ಸೃಷ್ಟಿಯಾಗುವ ಬದಲು ಎಲ್ಲ ಆವರಣ, ಅನಾವರಣಗಳಿಗೆ ಕಾರಣವಾಗಿರುವ ಶುದ್ಧ, ಲೋಕ ಹಿತಕಾರಕ ಪರ್ಯಾವರಣದ ನಿರ್ಮಾಣ ಮತ್ತು ರಕ್ಷಣೆ. ಸಾಹಿತಿ, ಕಲಾಕಾರ, ಕವಿ, ಚಿತ್ರಕಾರ, ಶಿಕ್ಷಣ ಪ್ರೇಮಿ, ನಿಸರ್ಗದ ಆರಾಧಕ, ವಿಶ್ವಮಾನವತೆಯ ಕನಸುಗಾರರಾಗಿದ್ದ ರವೀಂದ್ರನಾಥ ಟಾಗೋರ್‌ರವರು ಹೇಳುವ : ಎಲ್ಲಿ ಮನ ನಿರ್ಭೀತ, ಎಲ್ಲಿ ಶಿರ ನಿಮಿರಿ ನಿಂದಿಹುದೋ, ಎಲ್ಲಿ ಜ್ಞಾನ ನಿರಾತಂಕ, ಎಲ್ಲಿ ಜಗ ಸಂಕುಚಿತ ಭಿತ್ತಿಗಳ ದೆಸೆಯಿಂದ ನುಚ್ಚನೂರಾಗಿ ಒಡೆದಿಲ್ಲವೋ, ಎಲ್ಲಿ ನುಡಿ ಸತ್ಯದಂತರಾಳದಲ್ಲಿ ಹೊರಹೊಮ್ಮುವುದೋ, ಎಲ್ಲಿ ವಿವೇಚನೆಯ ಸ್ವಚ್ಛತೊರೆ ಜಡ ಸಂಪ್ರದಾಯದ ಮರಳು ಬೀಳಿನಲಿ ಇಂಗಿಲ್ಲವೋ ಎಂಬ ಪರ್ಯಾವರಣದ ವ್ಯಾಖ್ಯೆಯತ್ತ ಎಲ್ಲ ಚಿಂತಕರ ಗಮನ ಹರಿಯಬೇಕಿದೆ. ಆಗ ಗಾಂಧೀಜಿಯವರು ತಮ್ಮ ಆವರಣದಿಂದ ಹೊರಬಂದು ಹೇಳಿದ 'ಸತ್ಯವೇ ದೇವರು' ಎಂಬ ಮಾತು ನಿಜವೆಂದು ಎಲ್ಲರ ಅನುಭವಕ್ಕೆ ಬಂದು ಭೈರಪ್ಪನವರ ಆವರಣ ಮತ್ತು ಎನ್.ಎಸ್ ಶಂಕರರ ಅನಾವರಣದಂಥ ಮಾತುಗಳು ನಿಷ್ಪ್ರಯೋಜಕವೆನಿಸುತ್ತವೆ.

* * *

ಅತೀತದ ಆಕರ್ಷಣೆ

- ಸತ್ಯವ್ರತ

ಅನೇಕ ವಿಚಾರಪರರು, ಲೇಖಕರು, ಉಪನ್ಯಾಸಕರು ಅತೀತದ ಜೊತೆ ಅನುಸಂಧಾನ ಮಾಡುವುದು ಹೆಚ್ಚಾಗತೊಡಗಿದೆ. ಇವರಲ್ಲಿ ಗಾಂಧೀ ವಿಚಾರವಾದಿಗಳೂ ಸೇರಿದ್ದಾರೆ. ಇವರಿಗೆಲ್ಲ ಅತೀತದ ಕಡೆ ಒಲವು, ಅದರ ಕಡೆ ಎಳೆತ, ಸೆಳತ, ಹೀಗೇಕೆ? ಹಿಂದಿನ ಹೋರಾಟ, ಸಂಘರ್ಷಗಳಿಂದ ತುಂಬಿಹೋಗಿರುವ ಇತಿಹಾಸದ ಪುಟಗಳನ್ನು ತಿರುವಿಹಾಕುವುದರಲ್ಲಿ, ಅಲ್ಲಿ ಬರುವ ಪಾತ್ರಗಳನ್ನು ಅಭ್ಯಸಿಸುವ ಮತ್ತು ಅರ್ಥಮಾಡಿಕೊಳ್ಳುವ ಕಡೆ ಗೀಳು ಹೆಚ್ಚಾಗಿರುವುದಕ್ಕೇನು ಕಾರಣ? ಮುಂದೆ ನಿಂತಿರುವ ಈ ಪ್ರಶ್ನೆಗಳನ್ನು ಎದುರಿಸಿ ಸೂಕ್ತ ಉತ್ತರ ಹುಡುಕಲು ಪ್ರಯತ್ನಿಸಿದ ಪರಿಣಾಮವಾಗಿ ಮನಸ್ಸಿಗೆ ನಾಲ್ಕು ಪ್ರಮುಖ ಅಂಶಗಳು ಹೊಳೆದವು. ಅವೇ ಈ ಲೇಖನದ ಮುಖ್ಯ ವಸ್ತು.

ಮೊದಲು ಹೊಳೆದುದು ಇಂದಿನ ಪರಿಸ್ಥಿತಿಯ ಚಿತ್ರ. ಅದು ಎಲ್ಲರಿಗೂ ವಿದಿತ. ಅದನ್ನು ವಿವರಿಸುವ ಅಗತ್ಯವಿಲ್ಲ. ಸುತ್ತಲೂ ಕಣ್ಣು ಹಾಯಿಸಿದರೆ ಇಂದು ಎಲ್ಲಿಂದಲೂ, ಯಾರಿಂದಲೂ ಸ್ಫೂರ್ತಿಯಾಗಲಿ, ಆನಂದವಾಗಲಿ ಸಿಗಲಾರದಷ್ಟು ಕಲುಷಿತ, ವ್ಯಾಮಿಶ್ರವೂ, ಪರಿಹಾರವೇ ಕಾಣದಷ್ಟು ಕೆಟ್ಟು ಹೋಗಿದೆ. ಇಂಥಲ್ಲಿ ವರ್ತಮಾನದಲ್ಲಿ ಸ್ಫೂರ್ತಿಯನ್ನೂ ಆನಂದವನ್ನೂ ಅರಸುತ್ತಾ ಸುತ್ತಲೂ ತಿರುಗುವುದು ವ್ಯರ್ಥವೆಂದಾಯಿತು. ಅದನ್ನು ತನ್ನೊಳಗೇ ನೋಡಬೇಕು. ಅರ್ಥಾತ್ ಅಂತರ್ಮುಖಿಯಾಗಬೇಕು. ಒಳಗೆ ಸ್ಫೂರ್ತಿಯ ಚಿಲುಮೆಯನ್ನಿಟ್ಟವರು ಹೊರತೆಗೆದು ಕೊಟ್ಟಾರು. ಇಂಥವರು ಅತಿವಿರಳವೇ. ಉಳಿದವರು? ಅದು ಎಲ್ಲರಿಂದಾಗುವ ಮಾತಲ್ಲ. ಆದುದರಿಂದ ಅನೇಕರು ಅತೀತದ ಕಡೆ ಹೊರಳುತ್ತಾರೆ. ವರ್ತಮಾನದಲ್ಲಿ ದೊರೆಯದೆಂಬ ನಿರಾಶೆಗೆ ಬಲಿಯಾಗಿ ಹಿಮ್ಮೆಟ್ಟುವುದರ ಬದಲು ಅತೀತದಲ್ಲಿ ಸ್ಫೂರ್ತಿಯನ್ನು ಹುಡುಕಿ ಪ್ರಸನ್ನತೆ ಮತ್ತು ಸಂತೃಪ್ತಿಯನ್ನು ಕಂಡುಕೊಳ್ಳುತ್ತಾರೆ. ಹೀಗೆ ಒಂದು ದೊಡ್ಡ ಕೊರತೆಯನ್ನು ನೀಗಿಕೊಳ್ಳುತ್ತಾರೆ. ಅವರು ಸಿನಿಕರಲ್ಲ, ಸೋತ ಮನೋಭಾವದವರೂ ಅಲ್ಲ ಮತ್ತು ತಮ್ಮ ಅರಸುವಿಕೆಯ ಗೀಳನ್ನು ತೊರೆದವರೂ ಅಲ್ಲ. ಅರಸುವಿಕೆಯ ದಿಶೆ ಬದಲಿಸಿದರು, ವಿಧಾನದಲ್ಲಿ ಒಂದಿಷ್ಟು ಬೇರೆ ತಂತ್ರ ಉಪಯೋಗಿಸಿದರಷ್ಟೇ. ವರ್ತಮಾನದಲ್ಲಿ ಸಿಗಲಾರದ್ದನ್ನು ಅತೀತದಲ್ಲಿ ಹುಡುಕಿ ತೆಗೆದರು.

ಅತಿ ಪೂರ್ವದ ಕಡೆ ತಿರುಗುವುದು ಅಷ್ಟಾಗಿ ಹಿಡಿಸದು. ಆದ್ದರಿಂದ ಅನತಿಪೂರ್ವವೆಂದರೆ ನಮಗೂ ನಮ್ಮ ಕಾಲಕ್ಕೂ ಕಿಂಚಿತ್ತಾದರೂ ಸಂಬಂಧ ಇರುವ, ನಮಗೆ ಪ್ರಸ್ತುತ ಮತ್ತು ಪ್ರಾಸಂಗಿಕವೆನಿಸುವ ಮತ್ತು ನಮಗೆ ತಕ್ಷಣ ಅರ್ಥವಾಗುವ ಅನತಿ ಪೂರ್ವದ ಇತಿಹಾಸ. ಹೀಗೆ ನಮ್ಮ ಅತೀತದ ಆಕರ್ಷಣೆ ಮತ್ತು

ಅನತಿಪೂರ್ವದಲ್ಲಿ ಅರಸುವಿಕೆಯ ಗೀಳು ಎರಡೂ ಸ್ವಾತಂತ್ರ್ಯೇತಿಹಾಸದ ಕಡೆ ಹೊರಳುವಹಾಗೆ ಮಾಡುತ್ತವೆ. ಸ್ವಾತಂತ್ರ್ಯೇತಿಹಾಸದ ಕೇಂದ್ರ ಬಿಂದು ಗಾಂಧೀಜಿ. ಆಧುನಿಕ ಮತ್ತು ಪುರಾಣ ಪುರುಷ ಎರಡೂ ಇಲ್ಲಿ ಐಕ್ಯವಾಗುತ್ತವೆ. ಆದುದರಿಂದ ಗಮನ ಇಲ್ಲಿ ಕೇಂದ್ರೀಕೃತವಾಗುತ್ತದೆ.

ಈಗಿನ ಸಮಾಜದಲ್ಲಿ ಮತ್ತು ಜನಜೀವನದಲ್ಲಿ ಯಾವ ಮೌಲ್ಯಗಳು ನೆಲಸಿರಬೇಕೆಂದು ಬಯಸುತ್ತೇವೋ ಯಾವ ಮೌಲ್ಯಗಳು ಸಮಾಜ ಜೀವನಕ್ಕೆ ಆವಶ್ಯಕವೆಂದು ಪರಿಗಣಿಸುತ್ತೇವೋ ಯಾವುಗಳ ತೀವ್ರ ಅಭಾವ ತಲೆದೋರಿದೆಯೋ ಆ ಮೌಲ್ಯಗಳು ಅನತಿ ಪೂರ್ವದ ಇತಿಹಾಸದಲ್ಲಿ ನೋಡಸಿಕ್ಕುತ್ತವೆ ಎಂದು ತಿಳಿದು ಬಂದರೆ ಅತ್ತ ಕಡೆ ಸೆಳೆತ ಹೆಚ್ಚುವುದು ಸಹಜ. ಆ ಕಾಲದಲ್ಲಿ ಈಗ ನಾವು ಬಯಸುವ ಮೌಲ್ಯಗಳೆಲ್ಲ ಸಕ್ರಿಯ. ಪ್ರಭಾವಕಾರಿ ಮತ್ತು ಸ್ಫುಟವಾಗಿ ಎದ್ದು ಕಾಣುತ್ತಿದ್ದವು ಎನ್ನುವುದೇ ಸೆಳತ ಹೆಚ್ಚಲು ಕಾರಣ. ಆ ಮೌಲ್ಯಗಳು ಆಗ ಹೇಗೆ, ಯಾವ ಯಾವ ಸ್ವರೂಪ ಮತ್ತು ಸಂದರ್ಭಗಳಲ್ಲಿ ಸಕ್ರಿಯವಾಗಿದ್ದವೆನ್ನುವುದನ್ನು ಚೆನ್ನಾಗಿ ಅರಿಯಬೇಕು. ಅನಂತರ ಆ ಅರಿವಿನ ಬೆಳಕಿನಲ್ಲಿ ನಮ್ಮ ಕಾಲದ ಸಮಾಜ ಮತ್ತು ಜನಜೀವನದಲ್ಲಿ ಅವು ಪ್ರತಿಷ್ಠಿತವಾಗಲೆಂದು ಪ್ರಯತ್ನಿಸುವ ಹಂಬಲ ತಾನಾಗಿಯೇ ಪ್ರಬಲವಾದೀತು. ಪ್ರಬಲ ಹಂಬಲವಿದ್ದಲ್ಲಿ ಕಾರ್ಯಾರಂಭವಾಯಿತೆಂದು ತಿಳಿಯಬೇಕು. ಹೀಗೆ ಅತೀತದ ಕಡೆ ಮೊದಲು, ಅನಂತರ ಅಲ್ಲಿ ಅರಿತಿದ್ದನ್ನು ವರ್ತಮಾನಕ್ಕೆ ತರುವ ಕಾರ್ಯ. ಅರ್ಥಾತ್ ಅತೀತ ಮತ್ತು ವರ್ತಮಾನದ ಸಂಬಂಧದ ಜೋಡಣೆಗಾಗಿಯೆ. ಈ ಎಲ್ಲ ತಡಕಾಟ ಮತ್ತು ತಳಮಳ.

ಅನತಿ ಪೂರ್ವದ ಐತಿಹಾಸಿಕ ಘಟನಾವಳಿಯ ಕಡೆ ಆಕರ್ಷಣೆ ಹೆಚ್ಚಲು ಮತ್ತೂ ಒಂದು ಬಲವಾದ ಕಾರಣವಿದೆ. ದಾರ್ಶನಿಕ ದೃಷ್ಟಿಕೋನದಿಂದ ಅದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಸ್ವಾತಂತ್ರ್ಯೇತಿಹಾಸವೆಂದರೆ ಅದು ಜೀವನ್ಮರಣದ ಗಹನ ಹೋರಾಟದ ಪರ್ವಕಾಲ. ಆದರೆ ಈಗ ನಡೆಯುತ್ತಿರುವುದು ಆ ಹೋರಾಟದ ಪರಿಣಾಮ ಮತ್ತು ಫಲವನ್ನನುಭವಿಸುವ ಕಾಲ. ಪ್ರಯತ್ನದಲ್ಲಿ ಸಿಗುವ ಆನಂದ ಬೇರೆ. ಫಲ ಉಣ್ಣುವುದರಲ್ಲಿ ಸಿಗುವ ಆನಂದವೇ ಬೇರೆ. ಫಲಭೋಗದಲ್ಲಿ ಮನುಷ್ಯನಿಗೆ ನಿಜವಾದ ಆನಂದ ಸಿಗದು. ಈ ಎರಡೂ ಬಗೆಯ ಆನಂದಗಳಲ್ಲಿ ಗುಣಾತ್ಮಕ ಪ್ರಭೇದವಿದೆ. ಆದರೆ ತೀವ್ರ ಪ್ರಯತ್ನದ ಹೋರಾಟದಲ್ಲಿ ಆತ್ಮಿಕ ಆನಂದದ ಅನುಭವವಾಗುತ್ತದೆ. ವಿಶೇಷತಃ ಅದು ಅಹಿಂಸಕ ಹೋರಾಟವಾಗಿದ್ದಲ್ಲಿ ಇರುವ, ದೊರೆಯುವ ಆತ್ಮಿಕ ಆನಂದ ಇಮ್ಮಡಿ. ಆ ಆನಂದ ಇಂದ್ರಿಯಜನ್ಯವೂ ಅಲ್ಲ, ಕೇವಲ ಬುದ್ಧಿ ಜನ್ಯವೂ ಅಲ್ಲ. ಆದ್ದರಿಂದ ಹೆಚ್ಚು ಪರಿಶುದ್ಧ. ಆತ್ಮಿಕ ವಿಕಾಸಕ್ಕೂ ಔನ್ನತ್ಯ ಸಾಧಿಸಲೂ ಸಹಾಯಕ. ಮನುಷ್ಯ ಪುರುಷಾರ್ಥ ಸಾಧನೆಯಲ್ಲಿ ತೊಡಗಿದ್ದಾಗ, ಉನ್ನತ ಧ್ಯೇಯದ ಪ್ರತಿಷ್ಠಾಪನಾರ್ಥವಾಗಿ ಸಂಘರ್ಷದಲ್ಲಿದ್ದಾಗ ಅದರಲ್ಲಿ ಲಭಿಸುವ ಆನಂದ, ಅನುಭವಿಸುವ ರೋಮಾಂಚನ, ಪುಳಕಿತನಾಗುವಂತೆ ಮಾಡುವ ಆನಂದ

ಆತ್ಮಿಕವಾದುದು. ಅದರ ಸ್ವರೂಪ, ತಿರುಳು ಅಷ್ಟೇ ಉನ್ನತಮಟ್ಟದ್ದು. ಅದು ಸ್ವಾರ್ಥರಹಿತ ಮತ್ತು ಜನಹಿತಸಾಧಕ. ಇವೆಲ್ಲ ಕಾರಣಗಳಿಂದ ಪ್ರಯತ್ನದಲ್ಲಿರುವ ಆನಂದ ಫಲದ ಅನುಭವದಲ್ಲಿಲ್ಲವೆನ್ನಬೇಕಾಯಿತು. ಅನತಿ ಪೂರ್ವೇತಿಹಾಸದ ಎಂದರೆ ಸ್ವಾತಂತ್ರ್ಯ ಸಂಗ್ರಾಮದ ಕಡೆ ಆಕರ್ಷಿತರಾಗಿ ಅತ್ತಕಡೆ ಹೊರಳುವುದು ಇದೇ ಆಕರ್ಷಣೆಯಿಂದಾಗಿ.

ಇಲ್ಲಿ ಸ್ವಾತಂತ್ರ್ಯೋತ್ತರ ಕಾಲವನ್ನು ಫಲ ಉಣ್ಣುವ ಕಾಲವೆಂದು ಹೇಳಿದೆ. ಇದು ಬೇರೊಂದು ರೀತಿಯಲ್ಲಿ ವಿವರಿಸುವ ಪ್ರಯತ್ನವಾಗಿದೆ. ನಮ್ಮ ಸ್ವಾತಂತ್ರ್ಯೇತಿಹಾಸಕ್ಕಾಗಲಿ, ಅನಂತರದ ಕಾಲವನ್ನಾಗಲಿ ಮನಸ್ಸಿನಲ್ಲಿಟ್ಟು ಅದರ ಮೇಲೆ ಅಭಿಪ್ರಾಯ ರೂಪಿಸಿ ಬರೆದದ್ದಲ್ಲ. ಮಾನವೇತಿಹಾಸದಲ್ಲಿ ಮನುಷ್ಯ ವ್ಯವಹಾರಗಳು ನಡೆದು ಬರುತ್ತಿರುವ ರೀತಿ-ನೀತಿಗಳನ್ನು ವಿಶ್ಲೇಷಿಸಿ ಬರೆದಿರುವ ಸರ್ವಸಾಮಾನ್ಯ ಹೇಳಿಕೆಯಿದು. ವಿಶ್ವವಿಖ್ಯಾತ ಇತಿಹಾಸಕಾರ ಅರ್ನಾಲ್ಡ್ ಟಾಯನ್ಬೀ ನಾಗರೀಕತೆಗಳು ಕುಸಿಯುವುದಕ್ಕೆ ಸಾಮಾನ್ಯವಾಗಿ ಯಾವ ಯಾವ ಅಂಶಗಳು ಕಾರಣೀಭೂತವಾಗುತ್ತವೆ ಎಂದು ವಿವರಿಸ ಹೋಗಿ ಹೀಗೆ ಬರೆದರು "ಮಹತ್ಕಾರ್ಯಗಳನ್ನು ಸಾಧಿಸಿದ ತರುವಾಯ ಆಧ್ಯಾತ್ಮಿಕ ಅವನತಿಯ ಕಡೆ ಮಾನವರಾದ ನಾವು ಸಹಜ ಒಲವು ತೋರುವುದು ಕಂಡು ಬಂದಿದೆ. ಆ ಅವನತಿಗೆ ಅವರು ಬಲಿಯಾಗುತ್ತಾರೆ. ಆದ್ದರಿಂದ ಆ ಅವನತಿಗೆ ಅವರೇ ಜವಾಬ್ದಾರರು. ವಿಜಯೋನ್ಮಾದ ಮನುಷ್ಯರನ್ನು ಸಾಮಾನ್ಯತಃ ಸೋಮಾರಿಗಳನ್ನಾಗಿಯೋ ಆತ್ಮತೃಪ್ತರನ್ನಾಗಿಯೋ ಅಥವಾ ಅಹಂಕಾರಿಗಳನ್ನಾಗಿಯೋ ಮಾಡುತ್ತದೆ. ಉದಾಹರಣೆಗಳ ಸರಮಾಲಿಕೆಯನ್ನೇ ಕೊಟ್ಟು ವಸ್ತುತಃ ಇದು ಹೇಗೆ ಆಗುತ್ತದೆಂಬುದನ್ನು ಮತ್ತು ಪ್ರತಿಯೊಂದು ಸಂದರ್ಭದಲ್ಲಿಯೂ ಮಾನವರು ಹೇಗೆ ತಪ್ಪೆಸಗಿದ್ದಾರೆಂಬುದನ್ನೂ ತೋರಿಸಿದ್ದೇನೆ."

ಟಾಯನ್ಬೀಯವರ ಈ ಹೇಳಿಕೆ ಸರ್ವಾನ್ವಯೀ ಹೇಳಿಕೆ. ವಿಶ್ವದ ೩೬ ಸಭ್ಯತೆಗಳ ಹುಟ್ಟು, ಬೆಳವಣಿಗೆ ಮತ್ತು ವಿನಾಶಗಳನ್ನು ಅಭ್ಯಸಿಸಿ ವಿಶ್ಲೇಷಿಸಿದ ನಂತರ ತೆಗೆದ ನಿಷ್ಕರ್ಷೆಯಿದು. ತಳ್ಳಿಹಾಕಲಾಗದ ತರ್ಕದ ಮತ್ತು ಅನುಭವ ಪ್ರಾಮಾಣ್ಯ ಹಿಡಿದು ಅದರ ಅಧಾರದ ಮೇಲೆ ತೆಗೆದ ಸಾರಭೂತ ಹೇಳಿಕೆ ಆದ್ದರಿಂದ ಅದನ್ನು ಸರ್ವಥಾ ಅಲಕ್ಷಿಸುವಂತಿಲ್ಲ. ಭಾರತದಲ್ಲಿ ಇಂದು ಸರ್ವತ್ರಕಾಣಬರುತ್ತಿರುವ ಅವನತಿಗೂ ಟಾಯನ್ಬೀ ಹೇಳಿಕೆ ಅನ್ವಯಿಸುತ್ತದೆ. ಇವೆರಡೂ ಪರಸ್ಪರ ವ್ಯಾವರ್ತಕವಲ್ಲ, ಅವೆರಡರಲ್ಲಿ ವಿರೋಧವಿಲ್ಲ. ಎರಡೂ ಒಂದರ ಹಿಂದೊಂದು ಅನುಕ್ರಮಣಿಕೆಯಲ್ಲಿ ಬರುವ ಪೂರಕ ಕಾರ್ಯಗಳು. ಮೊದಲು ಜನಾಂಗದಲ್ಲಿ, ನಂತರ ಮುಖ್ಯ ಮುಖ್ಯ ವ್ಯಕ್ತಿಗಳಲ್ಲಿ ಅಹಂಕಾರ ಪ್ರವೇಶ, ಅದರ ಜೊತೆಗೇ ಅಥವಾ ಅದನನ್ನುಸರಿಸಿಯೇ ಫಲದ ಆಸೆ, ಫಲ ಅನುಭವಿಸುವ ಪ್ರಬಲ ಇಚ್ಛೆ, ಈ ಎರಡೂ ಸೇರಿದಡೆ ಅವು ಅನ್ಯ ಅವಗುಣಗಳನ್ನು ಆಹ್ವಾನಿಸುತ್ತವೆ. ಅವಕ್ಕೆಲ್ಲ ಪ್ರವೇಶಮುಕ್ತಾವಕಾಶ ನೀಡುತ್ತವೆ. ಅಂಥಲ್ಲಿ ಬುದ್ಧಿಯ ಸಮತ್ವ ಮತ್ತು ಸ್ವಸ್ಥ ನಿರ್ಣಯ ಶಕ್ತಿ ಕ್ಷೀಣವಾಗುತ್ತವೆ. ಪರಿಣಾಮವಾಗಿ, ಸಮಯ, ಸಂದರ್ಭ ಮತ್ತು ಇಡೀ ಸನ್ನಿವೇಶ ವಿಕಾರಮಯವಾಗುವುದು ತೀರ ಸಹಜ. ಇದೆಲ್ಲ ತಿಳಿದ ದೃಷ್ಟಾರರು

ಕಾಲಕಾಲಕ್ಕೆ ನಮ್ಮನ್ನು ಎಚ್ಚರಿಸುತ್ತಾ ಬಂದಿದ್ದಾರೆ. ಗಾಂಧಿ, ಟಾಯನ್ಬೀ ಅನಂತರ ವಿನೋಬಾ. ವಿನೋಬಾಜಿ ತಮ್ಮ ೧೪ವರ್ಷಗಳ ದೀರ್ಘಕಾಲಿಕ ಪಾದಯಾತ್ರೆಯಲ್ಲಿ ಒಂದು ದಿನದ ವಾಸ್ತವ್ಯ ಬಂಕಾಪುರದಲ್ಲಿದ್ದಾಗ ಅಂದಿನ ಸಾಯಂ ಪ್ರಾರ್ಥನಾ ನಂತರದ ಪ್ರವಚನದಲ್ಲಿ ಇವೇ ಎಚ್ಚರಿಕೆಯ ಮಾತುಗಳನ್ನು ಹೇಳಿದ್ದರು. ಅವರ ಮಾತುಗಳು ಇಂದೂ ಕಿವಿಯಲ್ಲಿ ಗುಣಗಣಿಸುತ್ತಿವೆ. ಆದರೆ ಇಡೀ ಜನಾಂಗವೇ ತನ್ನ ಶ್ರೇಷ್ಠ ಪುರುಷರ ಮಾತುಗಳನ್ನು ಕೇಳದಷ್ಟು ವಿವೇಕಶೂನ್ಯ. ಅಹಂಕಾರ ಮತ್ತರಾಗಿ ಫಲಭೋಗದ ಕಾರ್ಯವನ್ನು ಮುಂದುವರೆಸಿದ್ದೇವೆ. ಇಡೀ ಭಾರತೀಯ ಸಭ್ಯತೆಯನ್ನೇ ಅವನತಿಯ ಹಾದಿಯಲ್ಲಿ ಒಯ್ದಿದ್ದೇವೆ. ಭಾರತವೀಗ ಅತಿಭ್ರಷ್ಟ, ಅಸುಖಿ ಮತ್ತು ದರಿದ್ರ ರಾಷ್ಟ್ರಗಳಲ್ಲೊಂದೆನಿಸಿದೆ.

ಅಸೀರಿಯಾ, ಬ್ಯಾಬಿಲೋನ್, ಗ್ರೀಕ್, ವಿಜಯನಗರದ ಸಭ್ಯತೆಗಳೆಲ್ಲವೂ ಪತಿತವಾಗಿ ಇಳಿಜಾರಿನಲ್ಲಿ ವೇಗವಾಗಿ ಜಾರಿಹೋಗುತ್ತಿರುವಾಗ ಆ ಎಲ್ಲ ದೇಶಗಳ ಮಹಾಪುರುಷರು ಯಾರೂ ಸಹ ಅವನ್ನು ರಕ್ಷಿಸಲಾರದೆ ಹೋದರು. ಅವರ ಉತ್ತಮ ಪ್ರತಿಭಾಪೂರ್ಣ ಕಲೆ, ಶಾಸ್ತ್ರಗಳು ಯಾವವೂ ಮುಂದುವರಿಯದೆ, ನಡೆಯದೆ ಮೂಲೆಗುಂಪಾದವು. ಇಂಥ ಸ್ಥಿತಿಯಲ್ಲಿ ಆ ಕಾಲದ ಮಹಾಪುರುಷರನೇಕರು ಅತೀತದ ಕಡೆಯೇ ಹೊರಳಿದರು. ಅದು ಹೊರತು ಅವರಿಗೆ ಬೇರೆ ವಿಧಿ, ಅನ್ಯಮಾರ್ಗವಿಲ್ಲವಾಯಿತು. ಉನ್ನತ ನೈತಿಕ ಮೌಲ್ಯಗಳಿಂದ ಆಳಲ್ಪಡುವ ಜನಾಂಗ ಮತ್ತು ದೇಶಗಳಿಗಷ್ಟೇ ಶಾಂತಿ, ಸುಖ ಮತ್ತು ಸ್ವಾತಂತ್ರ್ಯ ಮೀಸಲು, ಅನ್ಯರಿಗಲ್ಲ.

ಅತೀತದ ಕಡೆ ಹೊರಳಲು ಇನ್ನೂ ಒಂದು ಕಾರಣ ಮಹತ್ವದ್ದಿದೆ. ಪರಿಶುದ್ಧ ಧ್ಯೇಯವಾದೀ ಹೋರಾಟದ ಅಥವಾ ವ್ಯಾಪಕ ಸಂಘರ್ಷದ ಕಾಲದಲ್ಲಿಯೇ ಉತ್ತಮೋತ್ತಮ ಗುಣಗಳು, ಮನುಷ್ಯನ ಸೃಜನಾತ್ಮಕ ಪ್ರತಿಭೆ, ಸಾಹಸಿಕತೆ, ವಿರೋಚಿತ ನಡವಳಿಕೆ, ಹೃದಯ ವಿಶಾಲತೆ, ಔದಾರ್ಯ, ಕ್ಷಮಾಶೀಲತೆ ಇತ್ಯಾದಿ ಎಲ್ಲವೂ ಹೊರಹೊಮ್ಮಿ ಪ್ರಕಟವಾಗುತ್ತವೆ. ಇವೆಲ್ಲವನ್ನೂ ಗಾಂಧಿ ಚಳುವಳಿಗಳಲ್ಲಿ ನೋಡಬಹುದಾಗಿದೆ. ಏಕೆಂದರೆ ಗಾಂಧಿಯವರ ಚಳುವಳಿಗಳೆಲ್ಲ ಸತ್ಯ ಮತ್ತು ಅಹಿಂಸೆಗಳ ಆಧಾರ ಪಡೆದು ಹೂಡಿದವೆನಿಸಿ, ರಾಜನೀತಿಯನ್ನು ಆಧ್ಯಾತ್ಮೀಕರಿಸಬೇಕೆಂಬ ಉದ್ದೇಶ್ಯಕ್ಕೆ ಗಾಂಧೀಜಿ ಸಂಕಲ್ಪಬದ್ಧರಾಗಿದ್ದುದರಿಂದ ಆಗಿನ ಜನಜೀವನ ವೈಯಕ್ತಿಕ ಮತ್ತು ಸಾಮಾಜಿಕ ಜೀವನಗಳೆರಡೂ ಹೆಚ್ಚು ಶುದ್ಧ, ಚೊಕ್ಕವಾಗಿದ್ದವು. ದೇಶದಲ್ಲಿ ನೈತಿಕ ಭಯವಿತ್ತು. ಆಗಿನ ದೇಶದ ಹಿರಿಮೆ ಏರಿತು; ಜಗತ್ತು ತಲೆದೂಗುವಂತಾಯಿತು. ಇವೆಲ್ಲ ಅತೀವ ಆಕರ್ಷಕ ಅಂಶಗಳು. ಶ್ರೇಷ್ಠ ಮೌಲ್ಯಗಳನ್ನೂ, ಸ್ಫೂರ್ತಿಯನ್ನೂ ಅರಸುವವರಿಗೆ ಅಂಥ ಕಾಲ ಕೈಬೀಸಿ ಕರೆಯುತ್ತದೆ. ಹೀಗಿರುವಾಗ ಅನತಿಪೂರ್ವೇತಿಹಾಸದ ಕಡೆ ಗಮನಹರಿದು ಅಲ್ಲಿ ಕೇಂದ್ರೀಕೃತವಾಗುತ್ತದೆ.

ಪೂರ್ವಕಾಲದಲ್ಲಿ ತಲೆಹುಗಿಸಿದ್ದೀರಿ, ಅದರಲ್ಲಿಯೇ ಇರುತ್ತೀರಿ. ಅದರಿಂದ ಹೊರಬರುವುದಿಲ್ಲವೇಕೆ ಎಂದು ಕೇಳುವವರಿಗೆ ಮೇಲಿದೆ ಉತ್ತರ.

***

ಬ್ರಹ್ಮವಾದಿ ಮತ್ತು ವಿಜ್ಞಾನಿಗಳಲ್ಲಿಯ ದೃಷ್ಟಿ ಭೇದ

- ವಿನೋಬಾ

ವೇದಗಳಲ್ಲಿ ವಿವಿಧ ದೇವತೆಗಳ ವರ್ಣನೆ ಇದೆ. ಅವರೆಲ್ಲರೂ ಒಬ್ಬನೇ ಪರಮಾತ್ಮನ ಅಂಗಭೂತ ಅಥವಾ ವಿಭೂತಿ ರೂಪದ ಗುಣನಿರ್ದೇಶಕರಾಗಿದ್ದಾರೆ. ಪರಮಾತ್ಮ ಅನಂತಗುಣಿಯಾಗಿರುವುದರಿಂದ ಸಾಧಕ ತನ್ನ ಚಿತ್ತದ ಶೋಧನೆ ಮಾಡಿ ಸ್ವಂತದ ಉಪಯೋಗಕ್ಕೆ ವಿಶಿಷ್ಟ ಗುಣಗಳ ಆಯ್ಕೆಯನ್ನು ಅನುಶೀಲನೆಗಾಗಿ ಮಾಡಿಕೊಳ್ಳುತ್ತಾನೆ. ಆಗ ಅದು ಅವನ ದೇವತೆಯಾಗುತ್ತದೆ. ಇಂಥ ವಿವಿಧ ದೇವತೆಗಳ ವರ್ಣನೆ ವೇದಗಳಲ್ಲಿದೆ. ಈ ವಿವಿಧ ದೇವತೆಗಳು ಸಾಧಕನ ಚಿತ್ತ ವಿಕಾಸಕ್ಕಾಗಿ ವರ್ಣಿತವಾಗಿವೆ. ದೇವತಾ ಸ್ವರೂಪವಾದ ವೇದವು ಸ್ವಾಧ್ಯಾಯ ಮೂಲಕ ಧ್ಯಾನ ಸಮಾಧಿಯಿಂದ ಸಾಕ್ಷಾತ್ಕ್ರಾರವಾಗುತ್ತದೆ. **ಸ್ವಾಧ್ಯಾಯಾತ್ ಇಷ್ಟ ದೇವತಾ ಸಂಪ್ರಯೋಗಃ** ಈ ಯೋಗ ಸೂತ್ರವು ಕೂಡ ಇದನ್ನೇ ಸೂಚಿಸುತ್ತದೆ. ವೇದಾಧ್ಯಯನವು ಯೋಗಪ್ರಧಾನವಾಗಿದೆ. ಅದರಲ್ಲಿ ಭಿನ್ನ ಭಿನ್ನ ದೇವತೆಗಳಿದ್ದಾರೆ. ಅವರು ಪರಮಾತ್ಮನ ಒಂದೊಂದು ಅಂಶರೂಪದಲ್ಲಿದ್ದಾರೆ. ಅಂಶದ ಧ್ಯಾನ ಮಾಡುತ್ತಾ ಮಾಡುತ್ತಾ ಕೊನೆಯಲ್ಲಿ ಆ ದೇವತೆಗಳ ಸಾಕ್ಷಾತ್ಕಾರ ಕೂಡ ಆಗುತ್ತದೆ.

ಅಗ್ನಿ, ವಾಯು, ಇಂದ್ರ, ಸೋಮ, ಆದಿತ್ಯ, ಸವಿತಾ ಈ ಪ್ರಕಾರ ನೂರು-ನೂರಿಪ್ಪತ್ತೈದು ದೇವತೆಗಳ ಹೆಸರು ವೇದದಲ್ಲಿ ಬರುತ್ತದೆ. ಅವೆಲ್ಲ ಭಗವಂತನ ಹೆಸರುಗಳೇ. ಈ ಎಲ್ಲಾ ದೇವತೆ ಭಗವಂತನ ಗುಣಾಂಶವಾಗಿವೆ. ಒಂದೊಂದು ಗುಣವನ್ನು ತೆಗೆದುಕೊಂಡು ಒಂದೊಂದು ದೇವತೆ ಆಗಿದೆ. ಉದಾಹರಣೆಗೆ, ವೈರಾಗ್ಯದ ದೇವತೆ ಅಗ್ನಿ, ಇಂದ್ರನೆಂದರೆ ಆಧ್ಯಾತ್ಮಿಕ ಶಕ್ತಿ, ವರುಣನೆಂದರೆ ಸಂಯಮಶಕ್ತಿ, ಸವಿತಾ ಎಂದರೆ ಪ್ರೇರಕ ಶಕ್ತಿ. ಹೀಗೆ ಒಂದೊಂದು ದೇವತೆಯಲ್ಲಿ ಒಂದೊಂದು ಗುಣದರ್ಶನವಾಗುತ್ತದೆ.

ದೇವತೆಯ ಸ್ವರೂಪ ಆಧ್ಯಾತ್ಮಿಕ. ಉದಾಹರಣೆಗೆ ಸೂರ್ಯ ದೇವತೆ-ಪ್ರೇರಣೆ; ಆಪೋದೇವತಾ-ಶ್ರದ್ಧೆ; ಗೃಹದೇವತಾ-ಸ್ಥಿರತೆ; ವನದೇವತಾ-ಸ್ವತಂತ್ರತೆ. ಇದನ್ನು ತಿಳಿಯದೆ ಕೇವಲ ಶ್ರದ್ಧಾಪೂರ್ವಕವಾಗಿ ಪೂಜೆ ಮಾಡುವವರಿಗೆ ಸಾಮಾನ್ಯ ಚಿತ್ತ ಶುದ್ಧಿ ಮಾತ್ರ ಪ್ರಾಪ್ತವಾಗುವುದು. ಆದರೆ ವಿಶಿಷ್ಟ ಚಿತ್ತಶುದ್ಧಿ ಆಯಾ ದೇವತೆಯ ಸ್ವರೂಪಜ್ಞಾನದ ಮೇಲೆ ನಿರ್ಭರವಾಗಿರುತ್ತದೆ. ಆದ್ದರಿಂದ ಈಶ್ವರನ ಭಿನ್ನ ಭಿನ್ನ ರೂಪಗಳಲ್ಲಿ ಅಂದರೆ ಗುಣರೂಪಗಳಲ್ಲಿ ಹೇಗೆ ಧ್ಯಾನ ಮಾಡಬೇಕೆಂಬುದನ್ನು ವೇದಗಳಲ್ಲಿ ಮುಖ್ಯವಾಗಿ ಹೇಳಲಾಗಿದೆ.

ವೇದದ ಕೆಲವು ಪುಟಗಳನ್ನು ನೋಡುತ್ತಲೇ ವೇದದಲ್ಲಿ ಹೇಳಿದ್ದೆಲ್ಲವೂ ಭಗವತ್ ಭಕ್ತಿಯ ಮಾತೆಂದೇ ಗೊತ್ತಾಗುತ್ತದೆ. ವೇದದಲ್ಲಿ ಭಿನ್ನಭಿನ್ನ ದೇವತೆಗಳ

ವರ್ಣನೆ ಬರುತ್ತದೆ. ಆ ದೇವತೆಗಳು ಭಗವಂತನ ವಿಭಿನ್ನ ಶಕ್ತಿಗಳಾಗಿವೆ. ಸೃಷ್ಟಿಯಲ್ಲಿ ದೇವನಿದ್ದಾನೆ. ಈ ದೇವ ಯಾರು? ನನ್ನಲ್ಲಿ ಯಾವ ರೀತಿ ನನ್ನ ಅಂತರ್ಯಾಮಿ ಇರುವನೋ ಅದೇ ಪ್ರಕಾರ ಸಮಸ್ತ ಸೃಷ್ಟಿಯ ಅಂತರ್ಯಾಮಿ ಸೃಷ್ಟಿಯಲ್ಲಿದ್ದಾನೆ. ಈತನೇ ಈಶ್ವರ. ಆ ಈಶ್ವರನ ಅನಂತ ಶಕ್ತಿಗಳು ಸೃಷ್ಟಿಯಲ್ಲಿ ಕಾರ್ಯವೆಸಗುತ್ತಿವೆ. ನಮ್ಮ ಮನಸ್ಸಿನಲ್ಲಿ ಅನೇಕ ವೃತ್ತಿಗಳು ಕೆಲಸಮಾಡುತ್ತಿವೆ. ಅವು ನಮ್ಮ ವಿವಿಧ ಶಕ್ತಿಗಳ ರೂಪದಲ್ಲಿ ಪ್ರಕಟಗೊಳ್ಳುತ್ತವೆ. ಅವುಗಳಲ್ಲಿ ನಾವು ಕೆಲವನ್ನೇನೋ ಎಣಿಸಬಹುದು. ಆದರೆ ವಾಸ್ತವದಲ್ಲಿ ಅವು ಅನಂತ. ಅದೇ ರೀತಿ ಈಶ್ವರನ ಅನಂತ ಶಕ್ತಿಗಳೇನಿವೆ ಅವುಗಳಲ್ಲಿ ಕೆಲವು ಮಾತ್ರ ಪ್ರಕಟಗೊಳ್ಳುತ್ತವೆ. ಅವೇ ಈ ದೇವತೆ. ಇನ್ನೊಂದು ಮಾತನ್ನು ಗುರ್ತಿಸಬೇಕಾಗಿದೆ. ಯಾವುದು ಪಿಂಡದಲ್ಲಿದೆಯೋ ಅದೇ ಬ್ರಹ್ಮಾಂಡದಲ್ಲಿದೆ. ಒಳಗೆ ರಕ್ತವಿದೆ, ಹೊರಗೆ ನೀರು; ಒಳಗೆ ಪ್ರಾಣವಿದೆ, ಹೊರಗೆ ವಾಯು; ಇಲ್ಲಿ ಕಣ್ಣುಗಳಿವೆ, ಅಲ್ಲಿ ಸೂರ್ಯ; ಈ ಪ್ರಕಾರ ಹೊರಗೆ ಪ್ರಥ್ವಿ ಇಲ್ಲಿ ಮಣ್ಣು (ಮಾಂಸ). ಉಪನಿಷತ್ತುಗಳು **ಅನಂತಂ ವೈ ಮನಃ ಅನಂತ ವಿಶ್ವೇ ದೇವಾಃ** ಎಂದು ಹೇಳಿದಾಗ ಅದರ ಅರ್ಥ ಅವು ದೇವತೆಗಳ ದ್ವಿವಿಧ ರೂಪಕ್ಕೆ ಮಾನ್ಯತೆ ಕೊಡುತ್ತವೆ. ಅದರಲ್ಲಿ ಒಂದು ಮಾನಸಿಕ ಸ್ವರೂಪದ ದೇವತೆಯಾದರೆ ಇನ್ನೊಂದು ಬಾಹ್ಯಸ್ವರೂಪದ ದೇವತೆ. ಕೆಲವರು ಬಾಹ್ಯದಲ್ಲಿ ದೇವತಾ ರೂಪ ಕೊಡುತ್ತಾರೆ. ನಾನು ಮಾನಸಿಕವಾಗಿ ದೇವತಾ ರೂಪದ ಚಿಂತನೆ ಮಾಡುತ್ತೇನೆ. ನಾನು ವೇದಗಳತ್ತ ಆಧ್ಯಾತ್ಮಿಕ ದೃಷ್ಟಿಯಿಂದ ನೋಡುತ್ತೇನೆ. ಆದರೆ ಅನೇಕರು ವೇದದೇವತೆಗಳು ಮೂಲದಲ್ಲಿ ಆಧ್ಯಾತ್ಮಿಕವಾಗಿರುವುದಿಲ್ಲವೆಂದು ತಿಳಿದಿರುತ್ತಾರೆ. ವೇದಗಳು ಮೂಲದಲ್ಲಿ ಆದಿ ದೈವಿಕ ಅಥವಾ ಆದಿ ಭೌತಿಕ. ಉಪನಿಷತ್ತುಗಳು ವೇದಗಳ ಪರಿಣಿತಿಯನ್ನು ಆದ್ಯಾತ್ಮದಲ್ಲಿ ಗುರುತಿಸಿವೆ ಎಂಬ ಮಾನ್ಯತೆ ರೂಢವಾಗಿದೆ. ಆದರೆ ವೇದಗಳು ಸ್ವತಃ ಈ ಮಾನ್ಯತೆಯನ್ನು ನಿರಾಕರಿಸುತ್ತವೆ, **ಏಕಂ ಸತ್ ವಿಪ್ರ ಬಹುದಾ ವದಂತಿ ಅಗ್ನಿಂ ಯಮಂ ಮಾತಾ ರಿಷ್ವಾನ ಮಾವುಃ** ಈ ವಚನ ವೇದದಲ್ಲಿ ಬಂದಿದೆ. ಅಗ್ನಿಸೂತ್ರದಲ್ಲಿ ಅಗ್ನಿಯ ಮೇಲೆ ದೇವತೆಗಳ ಆರೋಪಣೆ. ಈ ಮಾತು ವೇದದಲ್ಲಿ ಯಾವಾಗಲೂ ಇದೆ. ಆಧ್ಯಾತ್ಮಿಕ ವಿಚಾರವಿಲ್ಲದೆ ಈ ಮಾತಿನ ಉಪಪತ್ತಿ ಆಗಲಾರದು. ವೈದಿಕ ಮಂತ್ರಗಳನ್ನು ಆಧಾರವಾಗಿಟ್ಟುಕೊಂಡು ಧ್ಯಾನ ಮಾಡುವ ಅಭ್ಯಾಸ ಮಾಡುವುದರಿಂದ ಆಯಾ ದೇವತೆಗಳ ಸ್ವರೂಪ ಭಿನ್ನ ಭಿನ್ನ ಚಿತ್ತವೃತ್ತಿಗಳ ರೂಪದಲ್ಲಿ ಅನುಭವಕ್ಕೆ ಬರುತ್ತದೆ. ಅದು ಕೇವಲ ಕಾಲ್ಪನಿಕವಲ್ಲ. ಚಿತ್ತ ಮತ್ತು ಧ್ಯಾನದ ಗಣನೆಯನ್ನು ಕೂಡ ಕಲ್ಪನೆಯಲ್ಲಿಯೇ ಮಾಡುವುದಾದರೆ ಬೇರೆ ಮಾತು.

ಅನಂತ ವೈ ಮನಃ ಅನಂತ ವಿಶ್ವೇ ದೇವಾಃ ದ ಅರ್ಥ ವಿಶ್ವದೇವ ಮತ್ತು ಮನಸ್ಸಿನ ಐಕ್ಯತೆ. ಎರಡರಲ್ಲಿಯೂ ಪರಮಾತ್ಮ-ವಿಭೂತಿ ಪ್ರಕಟವಾಗಿದೆ.

ಯಾವ ವಿಭೂತಿ ಸೂರ್ಯನ ರೂಪದಲ್ಲಿ ಅಲ್ಲಿ ಪ್ರಕಟವಾಗಿದೆಯೋ ಅದೇ ಇಲ್ಲಿ ಚಿತ್ತದೊಳಗೆ, ಬುದ್ಧಿ ರೂಪದಲ್ಲಿ ಪ್ರಕಟಗೊಂಡಿದೆ. ಅಲ್ಲಿ ಚಂದ್ರರೂಪದಲ್ಲಿದ್ದರೆ ಇಲ್ಲಿ ಭಾವನೆಯ ರೂಪದಲ್ಲಿ. ಹೇಗೆ ಸೃಷ್ಟಿಯಲ್ಲಿ ಅನಂತ ಭಾವಗಳು ಅನಂತರೂಪಗಳಲ್ಲಿ ಆರ್ವಿಭೂತವಾಗುವಂತೆಯೇ ಚಿತ್ತದಲ್ಲಿ ಕೂಡ ಆಗುತ್ತದೆ. ಆದ್ದರಿಂದ ಒಂದೊಂದು ದೇವತೆಯ ಅನುಭವವನ್ನೂ ಮಾಡಿಕೊಳ್ಳಬೇಕು. ಅದಾದನಂತರ ಆಗುವ ಪರಮಾನುಭವವೇ ವೇದ ಸಾರ.

ನನ್ನ ಪುಪ್ಪಸ ಕೆಟ್ಟಾಗ ಸ್ವಚ್ಛ, ನಿರ್ಮಲ ಗಾಳಿಯಲ್ಲಿ ಹೋಗಿ ಇರುತ್ತೇನೆ. ಆಗ ಆ ಗಾಳಿ ಪುಪ್ಪಸವನ್ನು ಸ್ವಚ್ಛಮಾಡುತ್ತದೆ. ಕಣ್ಣುಗಳು ಕೆಟ್ಟರೆ ಹೊರಗಿನ ಹಸಿರುಬಣ್ಣದ ಜೊತೆಗೆ ಅದರ ಸಂಬಂಧವನ್ನು ಉಂಟುಮಾಡುವುದರಿಂದ ಕಣ್ಣುಗಳು ಸರಿಯಾಗುವುದಕ್ಕೆ ನೆರವಾಗುತ್ತದೆ. ಈ ಪ್ರಕಾರ ಈ ಪಿಂಡವು ಯಾವ ತತ್ವಗಳಿಂದ ರಚಿತವಾಗಿದೆಯೋ ಆ ತತ್ವವೇ ಶುದ್ಧರೂಪದಲ್ಲಿ ಜಗತ್ತಿನಲ್ಲಿದೆ. ಈ ಪಿಂಡದ ದೋಷವನ್ನು ಸರಿಮಾಡುವುದಕ್ಕಾಗಿ ಆ ತತ್ವಗಳ ಸಹಾಯವನ್ನು ನಾವು ಪಡೆಯುತ್ತೇವೆ. ಹೊರಗಿನ ಸಹಾಯ ಒಳಗಿನ ದೋಷಗಳನ್ನು ಅಳಿಸುವುದಕ್ಕೆ ದೊರೆಯುತ್ತದೆ. ಆದರೆ ನಾವು ಕೇವಲ ಪಿಂಡವಲ್ಲದೆ ಇನ್ನೂ ಬೇರೆಯೊಂದಾಗಿದ್ದೇವೆ. ಪಿಂಡವನ್ನು ಗುರ್ತಿಸುವ ಒಂದು ಕಾನ್‌ಸೆನ್ಸ್-ಚೇತನತತ್ವವಿದೆ. ಈ ಪರಿಶುದ್ಧ ಚೇತನವೇ ಪರಮಾತ್ಮ. ಈ ಪಿಂಡದ ಚೇತನದ ಸಂಬಂಧ ವ್ಯಾಪಕವಾದ ಪರಿಶುದ್ಧ ಚೇತನದೊಂದಿಗೆ ಬರುವುದರಿಂದ ಈ ಚೇತನ ಶುದ್ಧವಾಗುತ್ತದೆ. ಸೃಷ್ಟಿಯ ಈ ಸಮಸ್ತ ಶಕ್ತಿಗಳು ನಮ್ಮ ಮಟ್ಟಿಗೆ ದೇವತೆಗಳು. ನಾವು ಅವುಗಳ ಉಪಯೋಗವನ್ನು ಎಷ್ಟೊಂದು ಮಾಡಿಕೊಳ್ಳುತ್ತೇವೋ ಮತ್ತು ನಮ್ಮ ಕಾರಣದಿಂದ ಅವುಗಳ ಕ್ಷತಿ ಎಷ್ಟಾಗುತ್ತದೋ ಆ ಕ್ಷತಿಯನ್ನು ನಾವು ಪೂರ್ತಿಗೊಳಿಸಬೇಕು. ಸೃಷ್ಟಿದೇವತೆಯ ಬಳಿಗೆ ಹೋಗಿ ಅವನಿಂದ ಅನ್ನವನ್ನು ಕೇಳಿದಾಗ ಅದರ ಸೇವೆಯನ್ನು ಕೂಡ ಮಾಡಬೇಕಾಗುತ್ತದೆ. ನಾವು ಸೇವೆ ಮಾಡದಿದ್ದರೂ ಕೂಡ ಸೃಷ್ಟಿದೇವತೆ ಉದಾರವಿದೆ. ಅದು ಅನ್ನವನ್ನೇನೋ ಕೊಡುವುದು. ಆದರೆ ಅದರ ಶಕ್ತಿ ಕ್ಷೀಣವಾಗುತ್ತಾ ಹೋಗುತ್ತದೆ. ಅದರ ಶಕ್ತಿ ಕಡಿಮೆಯಾದಂತೆಲ್ಲ ನಮ್ಮ ಶಕ್ತಿ ಕೂಡ ಕ್ಷಯವಾಗುತ್ತಾ ಹೋಗುತ್ತದೆ.

ವೈಜ್ಞಾನಿಕ ರೀತಿಯಂತೆ ನಾವು ಇವುಗಳನ್ನು ಶಕ್ತಿಗಳೆಂದೇಕೆ ಕರೆಯುವುದಿಲ್ಲ ಇವುಗಳನ್ನು ದೇವತೆಗಳೆಂದೇಕೆ ಕರೆಯುತ್ತಾರೆ ಎಂದು ನನ್ನನ್ನು ಕೇಳಲಾಗಿದೆ. ಹೀಗೆ ಮಾಡುವುದರಿಂದ ಮನಸ್ಸಿನಲ್ಲಿ ಭಯದ ಸಂಚಾರವಾಗುತ್ತದಲ್ಲವೆ? ಈ ಶಕ್ತಿಗಳನ್ನು ರಮಿಸಿದರೆ ಅವು ಪ್ರಸನ್ನವಾಗುತ್ತವೆಂದು ಅನಿಸುತ್ತದೆ. ಕಾಡುಜನರು ಎಷ್ಟೊಂದು ದೇವತೆಗಳನ್ನು ಒಪ್ಪಿಕೊಳ್ಳುತ್ತಾರೆ ಮತ್ತು ಅವುಗಳಿಗೆ ಹೆದರುತ್ತಿರುತ್ತಾರೆ: ಈ ಹೇಳಿಕೆಯಲ್ಲಿ ಬಹಳಷ್ಟು ತಥ್ಯ ಇದೆ. ಆದರೆ ವೇದಗಳಲ್ಲಿಯ ದೇವತೆಗಳ

ವರ್ಣನೆಯಲ್ಲಿ ಭಯದ ಭಾವವೂ ಇಲ್ಲ ಅನೇಕತ್ವದ ಭಾವವೂ ಇಲ್ಲ. ದೇವತೆಗಳು ಭಗವಂತನ ಒಂದು ರೂಪ ಮಾತ್ರ. ನಾವು ಸತ್ಯವನ್ನು ನೋಡುವ ಸಾಧನ ಮಾತ್ರವಾಗಿದ್ದೇವೆ. ಜಡವಸ್ತುವನ್ನು ನಾವು ಚೈತನ್ಯಪೂರ್ಣವೆಂದು ಹೇಗೆ ಒಪ್ಪುವುದು? ವಿಜ್ಞಾನ ಮತ್ತು ಬ್ರಹ್ಮವಾದ ದಲ್ಲಿ ಇದೇ ವ್ಯತ್ಯಾಸವಿದೆ.ವಿಜ್ಞಾನ ಸೃಷ್ಟಿಯನ್ನು ಜಡವೆಂದುತಿಳಿಯುತ್ತದೆ. ಆದರೆ ಬ್ರಹ್ಮವಾದ ಚೆತನ ಚೇತನಪೂರ್ಣವೆಂದು ತಿಳಿಯುತ್ತದೆ. ಸಮಸ್ತ ವಿಶ್ವದಲ್ಲಿ ಚೇತನವೇ ಚೇತನವಿದೆ. ಮತ್ತು ಅದರ ದರ್ಶನವೇ ನಮ್ಮ ಪರಮೋದ್ದೇಶ್ಯ. ಈ ಪ್ರಕಾರ ಸೃಷ್ಟಿಯ ವಸ್ತುಗಳಲ್ಲಿ ಸೂರ್ಯ, ವೃಕ್ಷ ಅಥವಾ ಬೇರೆ ಬೇರೆ ಯಾವುದೇ ವಸ್ತುವಿನ ಮೇಲೆ ನಾವು ದೇವತ್ವದ ಆರೋಪಣೆ ಮಾಡುತ್ತೇವೆ. ಹೀಗೆ ಮಾಡುವಾಗ ಅವುಗಳ ಹಿಂದೆ ಸತ್ಯವಿದೆ ಎಂದು ತಿಳಿದು ನಾವು ಅದರ ಉಪಾಸನೆ ಮಾಡುತ್ತೇವೆ. ವಿಜ್ಞಾನ ಇದುವರೆವಿಗೂ ಈ ವಿಷಯದಲ್ಲಿ ತನ್ನ ನಿರ್ಣಯವನ್ನು ಕೊಟ್ಟಿಲ್ಲ. ವಿಜ್ಞಾನಿಗಳು ನಿಶ್ಚಿತವಾಗಿ ವೇದಾಂತದ ವಿರುದ್ಧ ಮಾತನಾಡುವುದಿಲ್ಲ. ಅವರು ಮೌನಿಗಳಾಗಿದ್ದಾರೆ. ವೇದಾಂತವು ಸೃಷ್ಟಿಯನ್ನು ನಿಶ್ಚಯಪೂರ್ವಕವಾಗಿ ಬ್ರಹ್ಮಮಯವೆಂದು ತಿಳಿಯುತ್ತದೆ.

ವಿಜ್ಞಾನಿ ಮತ್ತು ಬ್ರಹ್ಮವಾದಿಗಳ ದೃಷ್ಟಿಯಲ್ಲಿ ಯಾವ ಭೇದವಿದೆ? ಓರ್ವ ವಿಜ್ಞಾನಿಯ ಮಗ ಮರಕ್ಕೆ ನೀರುಣಿಸುತ್ತಾನೆ ಮತ್ತು ಅದರ ಹಣ್ಣನ್ನು ತಿನ್ನುತ್ತಾನೆ. ಬ್ರಹ್ಮವಾದಿಯ ಮಗನೂ ಕೂಡ ಹೀಗೆಯೇ ಮಾಡುತ್ತಾನೆ. ಒಂದು ವೇಳೆ ವಿಜ್ಞಾನಿಯ ಮಗ ಒಂದು ಕೋಲನ್ನು ತೆಗೆದುಕೊಂಡು ಮರಕ್ಕೆ ಪ್ರಹಾರಮಾಡತೊಡಗಿದರೆ ಅವನ ತಂದೆ ಏನನ್ನೂ ಹೇಳುವುದಿಲ್ಲ. ಆದರೆ ಬ್ರಹ್ಮವಾದಿಗೆ ಅವನ ಮಗ ಹೀಗೆ ಮಾಡುವುದರಿಂದ ತನ್ನ ಮಗ ಹಿಂಸೆ ಮಾಡುತ್ತಿದ್ದಾನೆ ಎಂದು ಅವನಿಗೆ ಪ್ರತೀತವಾಗುತ್ತದೆ. ತನ್ನ ಮಗ ಹಾಗೆ ಮಾಡುವುದನ್ನು ತಪ್ಪಿಸುತ್ತಾನೆ. ಇಂಥ ಭಾವನೆ ಯಾರಿಗಿದೆಯೋ ಅಂಥವರಿಗೆ ಪ್ರತಿಯೊಂದು ಸ್ಥಳದಲ್ಲಿ ಈಶ್ವರನ ಅಸ್ತಿತ್ವ ಕಾಣಬರುತ್ತದೆ. ಭಗವಂತ ಸಾವಿರಾರು ಕಣ್ಣುಗಳಿಂದ ತನ್ನನ್ನು ನೋಡುತ್ತಿದ್ದಾನೆ ಆದ್ದರಿಂದ ತನ್ನ ಮನಸ್ಸಿನಲ್ಲಿ ವಿಕೃತಿ ಬರಬಾರದೆಂದು ಅವನಿಗೆ ಪ್ರತೀತವಾಗುತ್ತದೆ. ಅವನನ್ನು ಪಾಪ ಸ್ಪರ್ಶಿಸಲಾರದು. ಒಂದು ವೇಳೆ ಸೃಷ್ಟಿಯಲ್ಲಿ ಚೈತನ್ಯವಿರದಿದ್ದರೆ ಈ ಎಲ್ಲವೂ ಮೂರ್ಖತೆಯೆ. ಆದರೆ ವೇದಾಂತವು ಚೈತನ್ಯವನ್ನು ಅಂಗೀಕರಿಸಿದೆ.

(ಮುಂದುವರಿಯುವುದು.....)

ಅನು:- ಸು.ಕೌ

* * *

ಸಿದ್ಧವನಹಳ್ಳಿ ಕೃಷ್ಣ ಶರ್ಮರ ನೆನಪಿನಲ್ಲಿ

- ನೀಲತ್ತಹಳ್ಳಿ ಕಸ್ತೂರಿ

(ಜುಲೈ ೪ ಕೃಷ್ಣಶರ್ಮರ ಜನ್ಮದಿನ. ಅವರ ನೆನಪಿಗಾಗಿ ಈ ಲೇಖನ)

ಬಿರುಗಾಳಿ ಬೀಸಿದಾಗ, ತರಗೆಲೆ, ಹುಲ್ಲುಕಡ್ಡಿ ಇತ್ಯಾದಿ ಎಲ್ಲವೂ ಆಕಾಶಕ್ಕೆ ಹಾರುತ್ತವೆ. ಗಾಳಿ ಇರುವವರೆಗೂ ಅಲ್ಲೆ ಹಾರಾಡುತ್ತವೆ. ಔನ್ನತ್ಯವನ್ನು ಅನುಭವಿಸುತ್ತವೆ. ಗಾಳಿ ಕಡಿಮೆ ಆದಂತೆ, ಒಂದೊಂದಾಗಿ ನೆಲಕ್ಕೆ ಮರಳುತ್ತವೆ. ಮಾನವ ಸಮಾಜದಲ್ಲೂ ಹಾಗೆಯೆ ಏನಾದರೂ ವಿಚಾರದ ಗಾಳಿ ಬೀಸುತ್ತದೆ. ಎಷ್ಟೋ ಮನಸ್ಸುಗಳನ್ನು ತನ್ನೆಡೆಗೆ ಸೆಳೆಯುತ್ತದೆ. ಎಷ್ಟೋ ವ್ಯಕ್ತಿಗಳು ವಿಚಾರದ ಗಾಳಿಗೆ ಸಿಕ್ಕಿ ನೆಲ ಬಿಟ್ಟು ಮುಗಿಲು ಸೇರುತ್ತಾರೆ. ವಿಚಾರದ ಬೆಳಕನ್ನು ಕಾಣುತ್ತಾರೆ. ಔನ್ನತ್ಯದ ಪುಳಕವನ್ನು ಅನುಭವಿಸುತ್ತಾರೆ.

ಇದು ಮನುಷ್ಯ ಜೀವಂತ ವ್ಯಕ್ತಿಗಳ ಪ್ರಕರಣ. ಆದ್ದರಿಂದ ಮುಗಿಲು ಮುಟ್ಟಿದ ಎಲ್ಲರೂ ಒಮ್ಮೆಲೇ ಕೆಳಕ್ಕೆ ಇಳಿಯುವುದಿಲ್ಲ. ಸ್ವಲ್ಪ ಎತ್ತರಕ್ಕೆ ಕೆಲವರು ಹೋದಾರು. ಇನ್ನಷ್ಟು ಎತ್ತರಕ್ಕೆ ಇನ್ನಷ್ಟು ಸಮಯಕ್ಕೆ ಇನ್ನು ಕೆಲವರು ಹೋದಾರು. ಅವರವರ ಶಕ್ತಿಗೆ ತಕ್ಕಂತೆ ಅವರವರ ವಿಚಾರ ನಿಷ್ಠೆಯ ಬಲಕ್ಕೆ ತಕ್ಕಂತೆ, ಅವರವರ ಆದರ್ಶ ಕಸುವಿಗೆ ತಕ್ಕಂತೆ ಅವರವರ ಗಗನಯಾನ, ಅವರವರ ವಿಚಾರ ವೈಭವ, ಅವರವರ ಆದರ್ಶಪ್ರಭೆ. ಎಲ್ಲೋ ಅಲ್ಲೊಬ್ಬ ಇಲ್ಲೊಬ್ಬ ನಿರಂತರವಾಗಿ ಶಾಶ್ವತವಾಗಿ ವಿಚಾರಕ್ಕೆ ಅಂಟಿಕೊಳ್ಳುತ್ತಾರೆ. ಆದರ್ಶಕ್ಕೆ ಬದ್ಧರಾಗಿರುತ್ತಾರೆ. ಇಡೀ ಬದುಕು ಪೂರಾ ಹಾಗೆಯೆ ಬದುಕುತ್ತಾರೆ.

ಗಾಂಧಿಯುಗದಲ್ಲಿ ಇಂಥದೇ ಬಿರುಗಾಳಿ ಬೀಸಿತು. ಎಷ್ಟೋ ಜನರನ್ನು ಸೆಳೆಯಿತು. ಮಣ್ಣಿನಿಂದ ಮೇಲಕ್ಕೆ ಎತ್ತಿತು. ಸ್ವಲ್ಪ ಸಮಯವೋ, ದೀರ್ಘಕಾಲವೋ, ನಿರಂತರವೋ ಆದರ್ಶದ ಸ್ಪರ್ಶದಲ್ಲೆ ಇರುವಂತೆ ಮಾಡಿತು. ಎಷ್ಟೋ ಜನ ಈಗ, ಆಗ, ಇನ್ನಷ್ಟು ಕಾಲ ಆ ಔನ್ನತ್ಯದಲ್ಲಿ ಇದ್ದು, ಅನಂತರ ಮಣ್ಣಿಗೆ ಮರಳಿದರು, ಆದರೆ ಕೆಲವರಾದರೂ ಅಲ್ಲೇ ಖಾಯಂ ಆಗಿ ನಿಂತರು, ಆದರ್ಶವನ್ನೇ ತಮ್ಮ ಉಸಿರನ್ನಾಗಿಸಿಕೊಂಡರು. ಆ ಎತ್ತರದಲ್ಲೆ ನಿಂತು, ಹಾಗೆಯೆ ಬಾಳಿದರು. ಬಾಳಿನ ಪೂರಾ ಎತ್ತರದ ವ್ಯಕ್ತಿಗಳೇ ಆಗಿ ಉಳಿದರು.

ಹಾಗೆ ಆದರ್ಶದ ವಿಚಾರದ ಬಿರುಗಾಳಿಗೆ ಮೈ ಮನ ತೆತ್ತುಕೊಂಡು, ಉನ್ನತ ಸ್ತರಕ್ಕೆ ಏರಿ, ಅಲ್ಲೆ ಖಾಯಂ ಆಗಿ ನಿಂತು ಬಾಳಿ, ಇತರರಿಗೂ ಆ ಔನ್ನತ್ಯದ ಸುಖಸ್ಪರ್ಶ ಮಾಡಿಸಿ ಕೃತಕೃತ್ಯರಾದವರಲ್ಲಿ ನಮ್ಮ ಕಣ್ಣೆದುರಿಗೇ, ನಮ್ಮೊಂದಿಗೇ ಇದ್ದವರು ಸಿದ್ಧವನಹಳ್ಳಿ ಕೃಷ್ಣ ಶರ್ಮಾಜಿ. ತಮ್ಮ ತಾರುಣ್ಯದಲ್ಲಿ, ನಾಡಿನಲ್ಲಿ ಬೀಸಿದ ರಾಷ್ಟ್ರಪ್ರೇಮದ, ತ್ಯಾಗದ, ಆದರ್ಶದ ಗಾಂಧೀ ಗಾಳಿಗೆ ಮೈಯೊಡ್ಡಿಕೊಂಡು, ಅದನ್ನೇ ಬಾಳಿನ ಉಸಿರನ್ನಾಗಿ ಮಾಡಿಕೊಂಡು ಆ ಮೌಲ್ಯಗಳಿಗೆ ಅನುಸಾರವಾಗಿ ಬಾಳಿ, ಅನೇಕರನ್ನು ಹಾಗೆಯೆ ಬಾಳಲು ಪ್ರೇರಣೆ ನೀಡಿ ದಾರಿ ತೋರಿ, ಆ ಯುಗಧರ್ಮವನ್ನು ಚಾಚು ತಪ್ಪದೆ

ಪಾಲಿಸಿದವರು ಶರ್ಮಾಜಿ.

ಕೃಷ್ಣಶರ್ಮಾಜಿ ಹುಟ್ಟಿದ್ದು ಚಿತ್ರದುರ್ಗ ಜಿಲ್ಲೆಯ ದೊಡ್ಡ ಸಿದ್ಧವನಹಳ್ಳಿ ಗ್ರಾಮದಲ್ಲಿ. ಜುಲೈ ೪, ೧೯೦೪. ಆಚಾರವಂತ ಧರ್ಮನಿಷ್ಠ ಕುಟುಂಬದಲ್ಲಿ. ತಂದೆ ರಂಗಾಚಾರ್. ತಾಯಿ ಕೆಂಪಮ್ಮ. ತುಂಬ ಬುದ್ಧಿವಂತ ಹುಡುಗ. ತಂದೆ ತಾಯಿಯರಲ್ಲಿ ಭವ್ಯ ಭವಿಷ್ಯದ ಆಸೆ ಹುಟ್ಟಿಸಿದ್ದ. ಆದರೆ ಶರ್ಮಾಜಿ ನಡೆದದ್ದು ಬೇರೆ ದಾರಿಯಲ್ಲಿ. ಆದರ್ಶದ ದಾರಿ, ಗಾಂಧೀ ದಾರಿಯಲ್ಲಿ. ಕಾಲೇಜು ವ್ಯಾಸಂಗ ಬಿಟ್ಟು ರಾಷ್ಟ್ರಸೇವೆಗೆ ಧುಮುಕಿದರು. ಸಾಹಿತ್ಯದ ಬೆನ್ನು ಹತ್ತಿದರು. ಪಂಡಿತ ತಾರಾನಾಥರ ಬಳಿ ಕೆಲಕಾಲ ಇದ್ದರು. ಸಂಸಾರ ವಿಮುಖರಾದಾರು ಎಂಬ ಶಂಕೆಯನ್ನು ಮೂಡಿಸಿದರು. ಆದರೆ ಹಾಗೆ ಆಗಲಿಲ್ಲ. ಸಂಸಾರವನ್ನು ಕಟ್ಟಿಕೊಂಡರು. ಆದರೆ ಅಲ್ಲೆ ನಿಲ್ಲಲಿಲ್ಲ. ಅದನ್ನು ಮೀರಿ ಲೋಕ ಸಂಸಾರವನ್ನು ಹೊಕ್ಕರು. ತಮ್ಮ ಎಲ್ಲ ಪ್ರತಿಭೆ ಚೈತನ್ಯವನ್ನು ನಾಡಸೇವೆಗೆ ಧಾರೆಯೆರೆದರು. ಧಾರವಾಡದ 'ಗೆಳೆಯರ ಗುಂಪು' ಎಂಬ ಜಿಜ್ಞಾಸುಗಳ ತಂಡದಲ್ಲಿದ್ದರು. ಬೇಂದ್ರೆಯವರ ಆಪ್ತ ಗೆಳೆಯರಾದರು. ಚಿಂತನದ ಚಿಲುಮೆಯಾದರು. ಅಂದರೆ ಎಲ್ಲೋ ಕಲ್ಪನಾ ಲೋಕದಲ್ಲೆ ವಿಹರಿಸಲಿಲ್ಲ. ಗಟ್ಟಿ ನೆಲವನ್ನು ಬಿಡಲಿಲ್ಲ. ಹೈದರಾಬಾದಿಗೆ ಹೋಗಿ ಹತ್ತು ವರ್ಷ ಇದ್ದರು. ಕಗ್ಗತ್ತಲೆಯ ರಾಜ್ಯವಾಗಿದ್ದ ಅಲ್ಲಿ ಜನಜಾಗೃತಿಯನ್ನು ಉಂಟುಮಾಡಲು ಶ್ರಮಿಸಿದರು. ೧೯೩೮ ರಲ್ಲಿ ಹೈದರಾಬಾದಿನ ನಿಜಾಂ ಸರ್ಕಾರದ ಆಗ್ರಹಕ್ಕೆ ಪಕ್ಕಾಗಿ, ಅಲ್ಲಿಂದ ಗಡೀಪಾರಾಗಿ, ನಿಂತ ಕಾಲಿನಲ್ಲಿ ಮನೆಬಿಟ್ಟು ಬರಬೇಕಾಯಿತು. ಸಂಸಾರ ಅಲ್ಲೆ. ಇವರು ಮಾತ್ರ ಹಳ್ಳಿ, ಚಿತ್ರದುರ್ಗ, ಹೊಸಕೋಟೆ ಎಲ್ಲೆಲ್ಲೋ ಅಲೆದು ಕೊನೆಗೆ ಬೆಂಗಳೂರು ಸೇರಿದರು. ತಿ.ತಾ, ಶರ್ಮರಂಥ ಹಿರಿಯರೂ ಪ್ರಚಂಡರೂ ಆದ ಪತ್ರಕರ್ತರ ಜೊತೆ ಸೇರಿ 'ವಿಶ್ವ ಕರ್ನಾಟಕ' ಪತ್ರಿಕೆಯ ಕೆಲಸ ವಹಿಸಿಕೊಂಡರು. ಆ ಇಬ್ಬರದೂ ಬೆಂಕಿ-ಗಾಳಿ ಜೊತೆ ಆಯಿತು. 'ವಿಶ್ವ ಕರ್ನಾಟಕ' ರಾಷ್ಟ್ರಪ್ರೇಮದ, ಸೇವೆ, ತ್ಯಾಗಗಳ ಹರಿಕಾರನಾಯಿತು. ಆ ಸಲುವಾಗಿಯೆ ಶರ್ಮಾಜಿ ಸೆರೆಗೆ ಹೋಗಬೇಕಾಯಿತು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ, ೧೯೪೭ರ ಮೈಸೂರು ಚಲೋ ಹೋರಾಟದಲ್ಲಿ ಶರ್ಮಾಜಿಗೆ ಸೆರೆಮನೆ ಆಯಿತು. ಆಗಲೇ ಗಾಂಧೀ ಸಾಹಿತ್ಯ ಸಂಘವನ್ನು ಕಟ್ಟಿ ಯುವಜನರನ್ನು ಸಂಘಟಿಸಿ ಸೇವೆಗೆ ತೊಡಗಿಸಿದರು. ಪತ್ರಿಕೆ, ಸಂಘಟನೆ, ಸ್ವಾತಂತ್ರ್ಯ ಹೋರಾಟ, ಸಹಕಾರ, ಗಾಂಧೀ ವಿಚಾರ ಪ್ರಚಾರ, ಅನಂತರ ಸರ್ವೋದಯ ಭೂದಾನ ಚಳುವಳಿ, ಬರಹ, ಗಾಂಧೀ ಸಾಹಿತ್ಯ ರಚನೆ, ಅನುವಾದ, ಒಂದಲ್ಲ ಎರಡಲ್ಲ ಹಲವು ಹತ್ತು ಬಗೆಯಲ್ಲಿ ಸೇವೆ ಮಾಡಿದರು. ಸೇವೆಗೆ ಜನರನ್ನು ಸೆಳೆದರು, ಸಿದ್ಧಗೊಳಿಸಿದರು.

ಶರ್ಮಾಜಿ ಅವರಲ್ಲಿ ಮೂರು ಶಕ್ತಿಗಳಿದ್ದವು. ಬರಹ, ಮಾತು, ಓಡಾಟ, ಮೂರನ್ನೂ ಅವರು ಜನಸೇವೆಗಾಗಿಯೇ ವ್ಯಯಿಸಿದರು. ಅವರ ಬರಹ ಅದ್ಭುತ. ೧೯೩೩ರಲ್ಲಿ 'ಯತಿರಾಜ ರಾಮಾನುಜ' ಕೃತಿ ಬಂತು. ಅಲ್ಲಿಂದ ೧೯೬೯ರ ವರೆಗೂ ಬರಹ ಪ್ರವಾಹ ಸದೃಶವಾಗಿ ಹರಿಯಿತು. ಗಾಂಧೀ ಸಾಹಿತ್ಯಕ್ಕೆ ಕನ್ನಡದಲ್ಲಿ ಒಂದು ಗಣನೀಯ ಸ್ಥಾನ ಒದಗಿಸಿದರು. ಅವರ 'ಪರ್ಣಕುಟಿ', 'ವಾರ್ಧಾಯಾತ್ರೆ' ಗಾಂಧೀ ಆಶ್ರಮದ ಚಿತ್ರಣ. ವ್ಯಕ್ತಿ-ಪರಿಸರ ಎರಡರ ಪರಿಚಯ ಇವು. ಕೊನೆಯಕೃತಿ 'ರಾಮಾವತಾರ',

ವಾಲ್ಮೀಕಿ ರಾಮಾಯಣ ಅತ್ಯಂತ ಸರಳ, ಸುಂದರ, ಸುಮನೋಹರ ಶೈಲಿ ಅವರದು. ಕನ್ನಡದಲ್ಲಿ ಅಂಥ ಇನ್ನೊಬ್ಬರಿಲ್ಲ. ಆ ಮಾದರಿ ಬರಹಕ್ಕೆ ಅವರು ಪ್ರವರ್ತಿಸಿದ ಅಂಕಣ ಬರವಣಿಗೆ ಹಾಗೂ ವ್ಯಕ್ತಿ ಚಿತ್ರ ಪ್ರಕಾರಗಳು ಮುಂದೆ ಬೃಹತ್ತಾಗಿ ಬೆಳೆದವು. ಅಂಕಣ ಬರವಣಿಗೆಗೆ ಹಾ.ಮ.ನಾಯಕರೂ ವ್ಯಕ್ತಿ ಚಿತ್ರಕ್ಕೆ ಎಚ್ಚೆಸ್ಕೆ ಅವರೂ ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆದರು. ಆ ಪ್ರಕಾರಗಳ ಪ್ರವರ್ತಕರೇ ಶರ್ಮಾಜಿ.

ಶರ್ಮಾಜಿ ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿದರು. ಸೇವಾಕಾರ್ಯ ಆದರೆ ಎಲ್ಲಿಗೂ ಅಂಟಿಕೊಳ್ಳಲಿಲ್ಲ. ವಿಧಿ ಯಾವಾಗ ಯಾವ ಕೆಲಸ ವಹಿಸುವುದೋ ಅದನ್ನು ಮಾಡುವುದು, ನಿರ್ಮೋಹದಿಂದ ಮಾಡುವುದು ಅಷ್ಟೆ. ಅನಾಸಕ್ತ ಕರ್ಮದಲ್ಲಿ ಗಾಂಧೀಜಿಯೇ ಇವರಿಗೆ ಮೇಲ್ಪಂಕ್ತಿ. 'ಪರ್ಣಕುಟಿ'ಯಲ್ಲಿ ಅನಾಸಕ್ತಿ ಕರ್ಮದ ಚಿತ್ರಣವಿದೆ. ಅದೇ ಶರ್ಮಾಜಿಗೂ ಅನ್ವಯ.

ಶರ್ಮಾಜಿಯ ಭಾಷಣ ಮಾಡಿಸಿ, ಚುನಾವಣೆಯಲ್ಲಿ ಗೆದ್ದು, ಶಾಸಕ, ಮಂತ್ರಿ ಆದವರು ಎಷ್ಟೊಂದು ಜನ. ಶರ್ಮಾಜಿ ಮಾತ್ರ ಯಾವ ಸ್ಥಾನಕ್ಕೂ ಆಶಿಸಲಿಲ್ಲ. ಕಾಲಿಗೆ ಚಪ್ಪಲಿಯೂ ಇಲ್ಲದೆ ನಾಡೆಲ್ಲಾ ತಿರುಗಿದವರು. ಅಸ್ಖಲಿತ ಪ್ರಾಮಾಣಿಕತೆ, ಅದ್ಭುತ ಚಿಂತನೆ, ಬರವಣಿಗೆ, ಭಾಷಣ, ಅತ್ಯಂತ ಸರಳ ಜೀವನ, ಈ ಮೌಲ್ಯಗಳ ಸಾಕಾರ ಮೂರ್ತಿ, ವಾಮನಾಕಾರ, ಆದರೆ ತ್ರಿವಿಕ್ರಮ ಸಾಧನೆ. ನಮಗೆಲ್ಲ ಅವರೇ ಕಣ್ಣೆದುರಿನ ಗಾಂಧೀಜಿ! ಒಂದು ರೋಲ್‌ಮಾಡೆಲ್, ನಮ್ಮೊಂದಿಗೇ ಇದ್ದೂ ನಮಗೆ ಮೇಲ್ಪಂಕ್ತಿ.

ಇವತ್ತಿನ ರೋಲ್‌ಮಾಡಲ್‌ಗಳನ್ನು ನೋಡಿದರೆ ಅಳು ಬರುತ್ತದೆ. ಶರ್ಮಾಜಿ ಆಗಲೇ ಚಿಂತಿತರಾಗಿದ್ದರು. ಮೌಲ್ಯಪತನಕ್ಕೆ ಘಾಸಿಗೊಂಡಿದ್ದರು. ೧೯೭೩ರಲ್ಲಿ ಅವರು ಕಣ್ಣುಮುಚ್ಚಿದಾಗ, ಈ ಕೊರಗಿನಲ್ಲೇ ಇದ್ದರು.

ಯುಗಧರ್ಮಕ್ಕೆ ಅನುಸಾರವಾಗಿ ಶರ್ಮಾಜಿ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನೆರವೇರಿಸಿ, ಅನೇಕರಿಗೆ ಅವರವರ ಪ್ರತಿಭಾನುಸಾರ ಪ್ರೇರಣೆಯಿತ್ತು ಧನ್ಯರಾದರು, ಪೂಜ್ಯರಾದರು.

೨೦೦೪ರಲ್ಲಿ ಆಪ್ತಮಿತ್ರರು ಸೇರಿ ಶರ್ಮಾಜಿಯ ಜನ್ಮಶತಮಾನೋತ್ಸವವನ್ನು ಸರಳವಾಗಿ ಆದರೆ ಸ-ಆರ್ಥಿಕವಾಗಿ ನಡೆಸಿದರು. ಶರ್ಮಾಜಿಯವರ ಸಮಗ್ರ ಮೂಲ ಬರಹಗಳನ್ನು ಮೂರು ಬೃಹತ್ ಸಂಪುಟಗಳಲ್ಲಿ ಪ್ರಕಟಿಸಿದರು. ಆ ಯೋಜನೆಯ ಫಲ ಸ್ವರೂಪವಾಗಿ ಈಗ ಒಂದು ಸ್ಮಾರಕ ಟ್ರಸ್ಟ್ ರೂಪುಗೊಂಡಿದೆ. ಶರ್ಮಾಜಿಯ ಸ್ಮರಣೆಯನ್ನು ಸದಾ ಹಸಿರಾಗಿ ಉಳಿಸುವುದು ಇದರ ಉದ್ದೇಶ.

ಶರ್ಮಾಜಿಯ ಸಂಪರ್ಕಕ್ಕೆ ಬಂದ ಎಲ್ಲರಿಗೂ ಅವರ ನೆನಪು ಚೇತೋಹಾರಿ, ಪ್ರೇರಕ, ಸ್ಫೂರ್ತಿದಾಯಕ ಎಂದರೆ ಉತ್ಪ್ರೇಕ್ಷೆಯೂ ಅಲ್ಲ, ವ್ಯಕ್ತಿ ಪ್ರಶಂಸೆಯೂ ಅಲ್ಲ. ಕೇವಲ ಅನುಭವ ಸತ್ಯ.

* * *

ತಿಲಕರ ಅಮರ ಕೃತಿ

{ಜುಲೈ ೨೩ ತಿಲಕರ ಜನ್ಮದಿನ. ಆ ಸವಿನೆನಪಿಗಾಗಿ ಈ ಸ್ಮರಣೆ}

ತಿಲಕರು ಜುಲೈ ೨೩, ೧೮೫೬ ರಂದು ಜನ್ಮತಾಳಿದರು. ಅವರು ತಮ್ಮ ಉಗ್ರ ದೇಶಾಭಿಮಾನ, ಲೇಖನಗಳು ಮತ್ತು ಪುಸ್ತಕಗಳ ಮೂಲಕ ಇಂದಿಗೂ ಅಮರರಾಗಿದ್ದಾರೆ. ಅವರು ರಚಿಸಿದ ಗ್ರಂಥಗಳೆಲ್ಲೆಲ್ಲ 'ಗೀತಾ ರಹಸ್ಯ' ಅಮರವಾದುದು. ಇದನ್ನು ಅವರು ಕೇವಲ ೫ ತಿಂಗಳಲ್ಲಿ ಬೇರೆ ಯಾವುದೇ ಗ್ರಂಥದ ನೆರವಿಲ್ಲದೆ ಕಾರಾಗೃಹದಲ್ಲಿದ್ದಾಗ ಬರೆದರು. ಅವರಿದ್ದ ಕಾರಾಗೃಹದ ಕೋಣೆ ೨೦-೧೨ ಅಡಿ ವಿಸ್ತೀರ್ಣವಾಗಿತ್ತು. ಈ ಗ್ರಂಥದ ರಚನೆಯಲ್ಲಿದ್ದಾಗ ಅವರ ಪತ್ನಿಯ ಸಾವಿನ ಸುದ್ದಿ ಅವರಿಗೆ ತಿಳಿಯಿತು. ಇಂಥ ಕಷ್ಟಗಳ ಮಧ್ಯಯೂ ವಿಚಲಿತರಾಗದೆ ಅವರು ಈ ಕೃತಿಯನ್ನು ರಚಿಸಿದರು. ಈ ಗ್ರಂಥದ ಪುಟಗಳ ಸಂಖ್ಯೆ ೮೫೬ ರಷ್ಟಿತ್ತು. ಅದು ಪ್ರಕಟಗೊಂಡ ಮೇಲೆ ಕೇವಲ ಒಂದುವಾರದಲ್ಲಿ ೬೦೦೦ ಪ್ರತಿಗಳು ಮಾರಾಟವಾದವಲ್ಲದೆ ಭಾರತದ ಇತರ ಭಾಷೆಗಳಲ್ಲಿಯೂ ಅನುವಾದಿತಗೊಂಡಿತು. ಅದೇ ರೀತಿ ಕನ್ನಡದಲ್ಲಿಯೂ ಸಹ ಅನುವಾದಗೊಂಡು ೧೯೧೯ ರಲ್ಲಿ ಮುದ್ರಿತ ಗೊಂಡಿತು. ಆಗ ಅದರ ಬೆಲೆ ಕೇವಲ ಮೂರು ರೂಪಾಯಿ ಮಾತ್ರ.

****

ಪ್ರಾರ್ಥನೆ

ನಾನು ಶಕ್ತಿ ಕೊಡೆಂದು ಪ್ರಾರ್ಥಿಸಿದೆ
ದೇವರು ನನಗೆ ಎದುರಿಸಲು ಕಷ್ಟಗಳನ್ನುಕೊಟ್ಟ
ನಾನು ಜಾಣ್ಮೆಯನ್ನು ಕೊಡೆಂದು ಪ್ರಾರ್ಥಿಸಿದೆ
ದೇವರು ನನಗೆ ಬಿಡಿಸಲು ಸಮಸ್ಯೆಗಳನ್ನು ಕೊಟ್ಟ
ನಾನು ಧೈರ್ಯಕ್ಕಾಗಿ ಪ್ರಾರ್ಥಿಸಿದೆ
ದೇವರು ನನಗೆ ದಾಟಲು ಅಪಾಯ ಕೊಟ್ಟ
ಪ್ರೇಮ ಕೊಡೆಂದು ಪ್ರಾರ್ಥಿಸಿದೆ
ದೇವರು ಸೇವೆಗಾಗಿ ಕಷ್ಟದಲ್ಲಿರುವವರನ್ನು ಕೊಟ್ಟ
ಅನುಗ್ರಹಗಳಿಗಾಗಿ ಪ್ರಾರ್ಥಿಸಿದೆ
ದೇವರು ಅವಕಾಶಗಳನ್ನು ಕೊಟ್ಟ
ನನಗೆ ಬೇಕಾದುದು ದೊರೆಯಲಿಲ್ಲ
ನಾನು ಅಗತ್ಯವಾದುದೆಲ್ಲ ಪಡೆದೆ
ನನ್ನ ಪ್ರಾರ್ಥನೆಗಳಿಗೆ ಮನ್ನಣೆ ದೊರೆಯಿತು

ಮಾಸ್ಟ್ ಸಾಭಾರ
ಅನು : ಸುಪ್ರಜ್ ಕೌಲಗಿ

****

ದೇವದೂತ ಮತ್ತು ಕವಿ

–ಗುರುದಯಾಳ್ ಮಲ್ಲಿಕ್

ಭಗವದ್ಗೀತೆಯೆಂಬ ಸ್ವರ್ಣದಾರದಲ್ಲಿ ಹೊಲಿದಿದ್ದ ಪುಸ್ತಕ ಗಾಂಧಿಯಾಗಿದ್ದರೆ ರವೀಂದ್ರರು ಉಪನಿಷತ್ತುಗಳ ಸಚಿತ್ರ ಗ್ರಂಥವಾಗಿದ್ದರು.

ಒಬ್ಬರುಕರ್ತವ್ಯದ ಆರಾಧಕರಾಗಿದ್ದರೆ, ಇನ್ನೊಬ್ಬರು ಸೌಂದರ್ಯದ ಪ್ರೇಮಿ. ಬೇರೆ ಬೇರೆ ಮೂಲೆಗಳಲ್ಲಿದ್ದುಕೊಂಡು ಅವರ ಪೂಜೆ ನಡೆದಿದ್ದರೂ ಅವರಿಬ್ಬರ ಪೂಜಾ ವಿಗ್ರಹ ಅದೇ ಸತ್ಯವೆಂಬ ಮೂರ್ತಿ.

ಗಾಂಧೀಜಿ ಚರಕದ ಪಕ್ಕವಾದ್ಯದೊಂದಿಗೆ ಸೇವೆಯ ಹಾಡನ್ನು ಹಾಡಿದರೆ, ಗುರುದೇವ ಹಾಡಿನ ಸೇವೆಯಲ್ಲಿಯೇ ತಮ್ಮನ್ನು ಧನ್ಯಗೊಳಿಸಿಕೊಂಡರು. ಆದರೆ ಅವರಿಬ್ಬರೂ ಜೋತೆಯಾಗಿ ಮನಮೋಹಕವಾದ ಪ್ರೇಮ ವರ್ತುಲದಲ್ಲಿ ನಡೆದರು.

ಗಾಂಧೀಜಿ ಕೊನೆಯಿಲ್ಲದ ನೀತಿಯ ದಾರಿಯಲ್ಲಿ ದೇವರತ್ತ ಸಾಗಿದರೆ ಗುರುದೇವ ಸೌಂದರ್ಯದ ಸಾನಿಧ್ಯದಲ್ಲಿ ಹರ್ಷಚಿತ್ತರಾಗಿ ಕುಣಿದರು, ತನ್ಮೂಲಕ ಭಗವತ್ ಹೃದಯಕ್ಕೆ ಗುಟ್ಟಾದ ದಾರಿಯೊಂದನ್ನು ರೂಪಿಸಿದರು.

ಒಬ್ಬರು ತಾವರೆಯಲ್ಲಿದ್ದು ಗುಡುಗಿನ ಮಧ್ಯೆಯೂ ಧ್ಯಾನ ಮಾಡಿದರೆ ಇನ್ನೊಬ್ಬರು ಗುಡುಗಿನಲ್ಲಿದ್ದೇ ಧ್ಯಾನ ಮಾಡಿದರು. ಆದರೆ ಇಬ್ಬರೂ ಸತ್ಯದ ಎರಡು ಮುಖಗಳಾದ ಭೀಕರತೆ ಮತ್ತು ಕೋಮಲತೆ, ದುರ್ಬಲತೆ ಮತ್ತು ಬಲಿಷ್ಠತೆಗಳನ್ನು ಸಾಕ್ಷಾತ್ಕರಿಸಿಕೊಂಡರು.

ಗಾಂಧೀಜಿಗೆ ವಿಶ್ವವು ಪರಮಾತ್ಮನ ಕಛೇರಿಯಾಗಿದ್ದರೆ ಗುರುದೇವಗೆ ಅದು ಭಗವಂತನ ತೋಟವಾಗಿತ್ತು. ಇಬ್ಬರೂ ಪರಿಶ್ರಮದ ಜೀವನ ನಡೆಸಿದರು. ಒಬ್ಬರು ಕಾಯಕದಲ್ಲೆ ಸಂತೋಷ ಕಂಡರೆ, ಇನ್ನೊಬ್ಬರು ಆನಂದದ ನಿರ್ಮಿತಿಯನ್ನೇ ತಮ್ಮ ಕಾಯಕ ಮಾಡಿಕೊಂಡರು. ವ್ಯಕ್ತಿಯ ಸಮಸ್ಯೆಯೇ ಜಗತ್ತಿನ ಸಮಸ್ಯೆ ಎಂದು ಗಾಂಧೀಜಿ ನಂಬಿದ್ದರು; ಗುರುದೇವ ಜಗತ್ತಿನ ಸಮಸ್ಯೆಯೆ ವ್ಯಕ್ತಿಯ ಸಮಸ್ಯೆಯೆಂದು ನಂಬಿದ್ದರು. ಆದರೆ ಜೀವನ ಸರಳರೇಖೆಯಲ್ಲ, ಅದೊಂದು ವರ್ತುಲವೆಂದು ಇಬ್ಬರೂ ಅರಿತಿದ್ದರು.

ಒಬ್ಬರು ಓರ್ವ ಶಿಲ್ಪಿ ಶಿಲೆಯನ್ನು ನೋಡುವ ದೃಷ್ಟಿಯಿಂದ ಜೀವನದತ್ತ ನಡೆದರೆ ಇನ್ನೊಬ್ಬರು ಪ್ರೇಮಿಯೊಬ್ಬನ ದೃಷ್ಟಿಯಿಂದ ನಡೆದರು. ಗಾಂಧೀಜಿ ಮಣ್ಣಿನ ಮುದ್ದೆಯಿಂದಲೂ, ಅರೂಪಗೊಂಡಿರುವ ಪದಾರ್ಥದಿಂದಲೂ ಸುಂದರ ವಿಗ್ರಹ ನಿರ್ಮಿಸಿದರೆ ಇನ್ನೊಬ್ಬರು ಹೂಗಳನ್ನು ಕಿತ್ತು ಪ್ರೇಮಿಯ ಜಡೆಯಲ್ಲಿ ಸಿಕ್ಕಿಸಿದರು. ಆದರೆ ಇಬ್ಬರೂ ಜೀವನವನ್ನು ಅಪ್ಪಿದರು. ಒಬ್ಬರು ಸೇವಕನಂತೆ, ಇನ್ನೊಬ್ಬರು ಹಾಡುಗಾರನಂತೆ; ಒಬ್ಬರು ಸೇವಕಿಯಂತೆ, ಇನ್ನೊಬ್ಬರು ಕನ್ಯೆಯಂತೆ.

ಹೀಗೆ ಗಾಂಧೀಜಿ ಮತ್ತು ಗುರುದೇವ ಇಬ್ಬರೂ ಪರಮಾತ್ಮನ ಹೃದಯ ತೋಟದಲ್ಲಿ ಬೆಳೆದರು. ಆದ್ದರಿಂದ ಅವರ ಜೀವನದ ಸೌಗಂಧ ದೇವರಂತೆ ಅಮರ.

ಅನು–ಸು.ಕೌ

* * *

ಓರ್ವ ಇಂಜನಿಯರ್ ಕೃಷಿಮುಖಿಯಾದ ಕಥೆ

– ವಿ. ಮಹೇಶ್

ಆ ಮುಂಜಾನೆ ಆಗತ್ತೂರಿನ ಒಂದು ತೆಂಗಿನ ತೋಪಿನಲ್ಲಿ ರೈತರು ಕ್ರಮೇಣ ಜಮಾಯಿಸಿದರು. ಯಾವುದೇ ಅಬ್ಬರ, ಆಡಂಬರ ಇಲ್ಲ. ನಮ್ಮ ಕಾಲೇಜಿನಲ್ಲಿಯ ಸಭೆ ಸಮಾರಂಭಗಳಿಗೆ ಹೋಲಿಸಿದಾಗ ಇದು ನಂಬಲಾರದಷ್ಟು ಸರಳವಾಗಿತ್ತು. ಇನ್ನು ಅಲ್ಲಿಗೆ ಮೈಸೂರಿನಿಂದ ಬಂದ ಕೃಷಿತಜ್ಞ ಹೇಗಿದ್ದರು? ಪುಟ್ಟ ಮೂರ್ತಿ, ಬಿಳಿ ಪೈಜಾಮ–ಜುಬ್ಬ ಧರಿಸಿದ್ದರು, ನೆಟ್ಟನೆ ಸುಟಿನಡೆ, ದಿಟ್ಟ ನಿಲುವು, ಮೈವೆತ್ತ ಕಾರುಣ್ಯ. ಇವರ ಹೆಸರು ಡಾಕ್ಟರ್ ಖಾದರ್. "ಇವರು ನಿಮಗೆ ಬೇಸಾಯದ ಬಗ್ಗೆ ಕೆಲವು ಮೂಲಭೂತ ಸಂಗತಿಗಳನ್ನು ತಿಳಿಸುತ್ತಾರೆ" ಎಂದು ಬ್ಯಾಂಕ್ ಮೆನೆಜರ್ ಹೇಳಿದಾಗ ನನಗೆ ಅಚ್ಚರಿಯಾಯಿತು, ಕೃಷಿ ಕುರಿತು ಈ ಪಟ್ಟಣಿಗನಿಗೇನು ಗೊತ್ತಿದ್ದೀತು ಎಂದು.

ಇಲ್ಲ, ಖಾದರ್ ನುಡಿದರು ಮುತ್ತಿನ ಹಾರದಂತೆ, ನಾವೆಲ್ಲ ಮಂತ್ರಮುಗ್ಧರಾಗಿ ಆಲಿಸಿದೆವು ಒಂದು ಪದವನ್ನೂ ಬಿಡದಂತೆ. ನಮಗೆ ಗೊತ್ತಿದ್ದ, ಆದರೆ ಆಚರಿಸಲಾಗದಿದ್ದ, ಸರಳ ಸಂಗತಿಗಳನ್ನೇ ಅವರು ವಿವರಿಸುತ್ತಿದ್ದರು. ನಾನೊಂದು ಹೊಸ ಲೋಕವನ್ನು ನೋಡುತ್ತಿರುವೆನೇನೋ ಎಂದು ಅನ್ನಿಸಿತು. ಆ ಹೃದಯ ಸಂವಾದದ ಸಾರವನ್ನು ಈ ಮುಂದಿನ 'ಪಂಚಶೀಲ'ಗಳಲ್ಲಿ ಕ್ರೋಢೀಕರಿಸಬಹುದು:

* **ಜೀವಿಪರ ವಿಜ್ಞಾನ:** ವಿಜ್ಞಾನ ಸದಾ ಜೀವಿಪರವಾಗಿಯೇ ಇರುತ್ತದೆ, ವಿರುದ್ಧವಾದರೆ ಅದು ವಿಜ್ಞಾನವಲ್ಲ.
* **ರೈತಬಂಧುಗಳು:** ವಾಯು, ಜಲ, ಸೂರ್ಯ ಮತ್ತು ಸೂಕ್ಷ್ಮಜೀವಿಗಳೇ ನಿಜಕ್ಕೂ ರೈತನ ಬದುಕನ್ನು ನಿರ್ಧರಿಸುವ ನೈಸರ್ಗಿಕ ಕಾರಕಗಳು. ಇವು ಇರುವ ತನಕ ರೈತ ಸುರಕ್ಷಿತ.
* **ಹೊಲದೊಲವು:** ಭೂಮಿ ನಮ್ಮೆಲ್ಲರ ತಾಯಿ. ಅವಳನ್ನು ನಾವು ಸದಾ ಸೊಪ್ಪು, ಸದೆ, ಕಸ ಕಡ್ಡಿಗಳಿಂದ ಮುಚ್ಚಿ ಕಾಪಾಡುತ್ತಿರಬೇಕು. ಅಂದರೆ ಮುಚ್ಚಿಗೆ ಹಾಕಿ ರಕ್ಷಿಸಬೇಕು. ಉಳುಮೆಯ ಅಗತ್ಯವಿಲ್ಲ. ಭೂಮಿಯ ಮೇಲೆ ನಮ್ಮ ಪಾದಗಳಿಂದ ಪ್ರದಕ್ಷಿಣೆ ಹಾಕುತ್ತಿರಬೇಕು. ವಾಹನಗಳಿಂದಲ್ಲ.
* **ಸಹಜೀವನ:** ಪರಸ್ಪರ ಅವಲಂಬನೆಯೇ ನಿಸರ್ಗದ ನಿಯಮ. ಬೇಸಾಯದ ಮೂಲ ಮಂತ್ರವಿದು. ಮಾಂಸಾಹಾರ ಮಾನವನಿಗೂ ಕೃಷಿಗೂ ಏಕಪ್ರಕಾರವಾಗಿ ಹಾನಿಕಾರಿ.

* **ವಿಕೇಂದ್ರೀಕರಣ:** ಇದು ನಿಸರ್ಗದಲ್ಲಿಯ ಇನ್ನೊಂದು ಸೂತ್ರ. ಅಂದಮೇಲೆ ನಿಸರ್ಗದ ಶಿಶುವಾದ ಮಾನವ ಇದಕ್ಕೆ ಬದ್ಧನಾಗಿರಬೇಕಾದದ್ದು ಖುದ್ದು ಆತನ ಉಳಿವಿನ ದೃಷ್ಟಿಯಿಂದ ಅನಿವಾರ್ಯ. ಹೀಗಲ್ಲದೆ ಕೇಂದ್ರೀಕರಣಕ್ಕೆ ಆತ ಶರಣಾದದ್ದಾದರೆ ಆತನ ಸರ್ವನಾಶ ಕಟ್ಟಿಟ್ಟ ಬುತ್ತಿ.

ಒಂದೊಂದು 'ಶೀಲ' ಕುರಿತಂತೆಯೂ ಖಾದರ್‌ರವರು ನೀಡಿದ ಪ್ರಾತ್ಯಕ್ಷಿಕೆ ನನ್ನನ್ನು ಪೂರ್ತಿ ಅಂತರ್ಮುಖಿಯಾಗಿಸಿತು; ನನ್ನೊಳಗಿನ ಸುಪ್ತ ರೈತಪ್ರಜ್ಞೆ ಜಾಗೃತವಾಯಿತು. ಇದರಿಂದ ಉತ್ತೇಜಿತನಾಗಿ ಇದೇ ಮಾದರಿಯ ಬೇಸಾಯವನ್ನು ನಮ್ಮ ೧೫ ಎಕರೆ ಪ್ರದೇಶಕ್ಕೆ ವಿಸ್ತರಿಸಿದೆ. ಸಂದ ಐದು ವರ್ಷಗಳಲ್ಲಿ ನನ್ನ ಹೂಡಿಕೆ ಮತ್ತು ನನಗೆ ಬಂದ ಫಸಲಿನ ಲೆಕ್ಕ ಉಳಿದ ಕತೆ ಹೇಳುತ್ತದೆ. ೮೦೦ ಬಾಳೇಮರಗಳಿಂದ ದೊರೆತ ಬಾಳೇಕಾಯಿ ತೂಕ ೮೦೦೦ಕೆ.ಜಿ. ಇದನ್ನು ರಖಮ್ಮಾಗಿ ಮಾರಿ ಬಂದ ಮೊಬಲಗು ರೂ ೮೦,೦೦೦. ಮಾಡಿದ ಖರ್ಚು ರೂ ೬೪೦. ನಿವ್ವಳ ಲಾಭ ರೂ ೭೯,೩೬೦.

ಈ ಸಹಜ ಕೃಷಿಯಲ್ಲಿ ಎಷ್ಟು ಜನ ಕೆಲಸ ಮಾಡಿದರು ಎಂಬುದೊಂದು ಕುತೂಹಲಕಾರಿ ಪ್ರಶ್ನೆ. ಖಾದರ್‌ರು ಬೋಧಿಸಿದ ಕ್ರಮವನ್ನು ಜಾರಿಗೆ ತರುವ ಮೊದಲು ನಮ್ಮ ೧೫ ಎಕರೆ ಜಮೀನಿನಲ್ಲಿ ದಿನವಹಿ ನಾಲ್ಕು-ಐದು ಮಂದಿ ಕೆಲಸ ಮಾಡಿದರೂ ಅದು ಪೂರೈಸುತ್ತಿರಲಿಲ್ಲ. ಹೆಚ್ಚಿಗೆ ಆಳುಗಳನ್ನು ಇದಕ್ಕೆ ಹಚ್ಚಲು ನಮ್ಮ ಬಳಿ ಹಣವಿರಲಿಲ್ಲ. ಹೀಗಾಗಿ ಹೆಚ್ಚುವರಿ ಜಮೀನನ್ನು ಇತರರಿಗೆ ಗುತ್ತಿಗೆ ನೀಡಿ ತೃಪ್ತರಾಗುತ್ತಿದ್ದೆವು.

ಎಂಜಿನಿಯರಿಂಗ್ ಶಿಕ್ಷಣವನ್ನು ಕೈದುಮಾಡಿ ಈಗ ನಾನು ಪೂರ್ಣಕಾಲ ಸಹಜಕೃಷಿಯಲ್ಲಿ ಮಗ್ನನಾಗಿದ್ದೇನೆ. ನನ್ನ ಈ ನಿರ್ಧಾರ ಆತ್ಮಘಾತಕ, ಎಂಜಿನಿಯರಿಂಗಿನಲ್ಲೇ ಮುಂದುವರೆದಿದ್ದರೆ ತಿಂಗಳಿಗೆ ಕನಿಷ್ಠ ರೂ ೨೦,೦೦೦ ಪಗಾರ ಪಡೆದು ಆರ್ಥಿಕವಾಗಿ ಅಧಿಕ ಹಣ ಗಳಿಸಬಹುದಾಗಿತ್ತು ಎನ್ನುವ ಮಿತ್ರರಿಗೆ ಒಂದು ಮಾತು: ನಮ್ಮ ೧೫ ಎಕರೆ ಹೊಲದ ಕೇವಲ ಮೂರನೆಯ ಒಂದರಷ್ಟು ಭಾಗದಲ್ಲೇ (೫ ಎಕರೆಯಲ್ಲಿ) ನಾವು ಅಷ್ಟು ಮೊಬಲಗನ್ನೂ ಈಗಲೇ ಸಂಪಾದಿಸುತ್ತಿದ್ದೇನೆ, ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ, ತಂದೆ, ತಮ್ಮ, ಅಜ್ಜಿ, ೨ ಹಸು, ೧ ಕರು, ೫ ನಾಯಿಗಳು, ೧ ಮೊಲ ಮತ್ತು ದಿನವಹಿ ಬರುವ ನೆಂಟರು ಇಷ್ಟರು ಹೀಗೆ ಸರಾಸರಿಯಲ್ಲಿ ೧೫-೧೬ ಜೀವಿಗಳು ನೆಮ್ಮದಿಯಿಂದ ಬಾಳುತ್ತಿದ್ದೇವೆ.

ಮಣ್ಣಿನ ಮಕ್ಕಳೆಲ್ಲರೂ ಮಣ್ಣಿಗೆ ಮರಳಿದರೆ ಇದೇ ನೆಮ್ಮದಿ, ಸಂತೃಪ್ತಿ ಮತ್ತು ಮನೋದೈಹಿಕ ಆರೋಗ್ಯ ಗಳಿಸುವುದು ಖಂಡಿತಾ ಸಾಧ್ಯವಿದೆ. ಈ ಅನುಭವ ನನಗೊಂದು ಪಾಠ ಕಲಿಸಿದೆ: ಆದ್ಯತಾನುಸಾರ ರೈತ ವಾಯು, ನೀರು,

ಬೆಳಕು ಮತ್ತು ಆಹಾರ ಇವುಗಳತ್ತ ಲಕ್ಷ್ಯ ಹರಿಸಿದ್ದಾದರೆ ಹಣ ತಾನಾಗಿಯೇ ಅವನಲ್ಲಿ ಜಮಾಯಿಸುತ್ತದೆ. ಹೀಗಲ್ಲದೇ ಹಣ ಗಳಿಸುವುದನ್ನೇ ಗುರಿ ಇಟ್ಟುಕೊಂಡದ್ದಾದರೆ ಅದು ಬಿಸಿಲ್ಗುದುರೆಯಾಗುತ್ತದೆ, ಇತ್ತ ಹೊಲ ಬರಡಾಗುತ್ತದೆ. 'ಬೇಸಾಯದವ ತಾ ಬೇಗ ಸಾಯ' ಎಂಬ ನಾಣ್ನುಡಿ ಹೇಳುವುದಾದರೂ ಇದನ್ನೇ ಅಲ್ಲವೆ? ಡಿವಿಜಿಯವರು ನುಡಿದಿದ್ದಾರೆ:

ಪ್ರಕೃತಿಯನವರತ ಮನುಜನ ತಿದ್ದುತಿರುವಂತೆ
ವಿಕೃತಿಗೊಳಿಸುವನವನುಮಾಕೆಯಂಗಗಳ
ಭೂಕೃಷಿಕ ರಸತಂತ್ರಿ ಶಿಲ್ಪಿ ವಾಹನಯಂತ್ರಿ
ವ್ಯಾಕೃತಿಸರೇನವಳ? ಮಂಕುತಿಮ್ಮ

ಇಲ್ಲಿ 'ಪ್ರಕೃತಿ' ಅಂದರೆ ನಮ್ಮೆಲ್ಲರ ತಾಯಿಯಾಗಿರುವ ಭೂಮಿ ಅಥವಾ ನಿಸರ್ಗ ಎಂದರ್ಥ. ಇದೆಂದೂ ಜಡವಲ್ಲ, ಇದು ಸದಾ ಗತಿಶೀಲ. ಇದರಲ್ಲಿ ಮೂರು ಬಗೆಯ ಪ್ರಕ್ರಿಯೆಗಳು ಏಕಕಾಲದಲ್ಲಿ ಜರಗುತ್ತಿರುವುವು: ಸೃಷ್ಟಿ, ಸ್ಥಿತಿ, ಲಯ. ಅಂದರೆ ಹೊಸ ವಸ್ತುಗಳ ಉತ್ಪಾದನೆ, ಹಳೆಯವುಗಳ ಜೊತೆ ಸಹಜೀವನ ಮತ್ತು ಕ್ರಮೇಣ ಹಳೆಯವುಗಳ ನಾಶ. ಸಸ್ಯ ಮತ್ತು ಪ್ರಾಣಿಗಳ ಹುಟ್ಟು–ಬೆಳವಣಿಗೆ–ಸಾವು ಗಮನಿಸಿದರೆ ಈ ಅಂಶ ಸ್ಪಷ್ಟವಾಗುವುದು.

ನಿಸರ್ಗದ ಮೇಲೆ ಮಾನವ ಏನೂ ಅತಿರೇಕ ಎಸಗಿದರೂ -- ಉದಾಹರಣೆಗೆ ಹರಿಯುವ ನೀರಿಗೆ ಕಟ್ಟೆ ಕಟ್ಟಿ ಅದರ ಸ್ವಾಭಾವಿಕ ಗತಿಯನ್ನು ನಿರ್ಬಂಧಿಸುವುದು, ಗುಡ್ಡ ಕಡಿದು ಗದ್ದೆ ಅಥವಾ ತೋಟ ಮಾಡಿ ರಾಸಾಯನಿಕಗಳನ್ನು ಸುರಿದು ಅತಿಶಯ ಪೈರು ಬೆಳೆಯುವುದು, ಇತ್ಯಾದಿ (ಇಲ್ಲೆಲ್ಲ ದುರಾಸೆಯೇ ಪ್ರೇರಣೆ) -- ಕ್ರಮೇಣ ಅವು ವಿನಾಶದ ಅಂಚು ತಲಪುವುದು ಎದ್ದು ಕಾಣುವ ದೃಶ್ಯಗಳು. ಅಂದರೆ ಪ್ರಕೃತಿ ವಿರೋಧಿಯಾಗಿ ಮಾನವ ಮಾಡುವ ಎಲ್ಲ ಅಪಚಾರಗಳೂ ಕ್ರಮೇಣ ಧೂಲಿದೂಸರವಾಗುತ್ತವೆ, ಮತ್ತೆ ಪ್ರಕೃತಿ ನವ ಸೃಷ್ಟಿಯ ಕಾರ್ಯವನ್ನು ಆರಂಭಿಸುತ್ತದೆ.

ಹೀಗೆ ನಮ್ಮ ಬೇಸಾಯಗಾರರಾಗಲೀ (ಭೂ ಕೃಷಿಕ), ಸದ್ಯದ ಲಾಭವೊಂದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಭೂಮಿಗೆ ಹೇರಳವಾಗಿ ರಾಸಾಯನಿಕಗಳನ್ನು ಸುರಿದು ಕೃಷಿ ಮಾಡುವ ಲಾಭಕೋರರಾಗಲೀ (ರಸತಂತ್ರಿ), ಇವರಿಗೆ ನೆರವೀಯುವ ಎಂಜಿನಿಯರುಗಳಾಗಲೀ (ಯಂತ್ರವಾಹನ ಶಿಲ್ಪಿ) ಪ್ರಕೃತಿಯನ್ನು ಎಷ್ಟೇ ಹಿಂಸಿಸಿ ವಿರೂಪಗೊಳಿಸಿದರೂ ಮತ್ತೆ ನಿಸರ್ಗ ತನ್ನ ಪುನಸ್ಸ್ಥಾಪನ ಪ್ರಕ್ರಿಯೆಯನ್ನು ತೊಡಗಿ ಮಾನವನನ್ನು ಸರಿದಾರಿಗೆ ತರುತ್ತಿರುವುದು ಎಂಬುದು ಈ ಸಾಲುಗಳಲ್ಲಿ ಹುದುಗಿರುವ ಅರ್ಥ. ನಾನು ಮೇಲೆ ವಿವರಿಸಿರುವ ಒಂದು ಪ್ರಯೋಗ ಈ ದಿಶೆಯಲ್ಲಿ ಒಂದು ಪುಟ್ಟ ಪ್ರಯತ್ನ ಮಾತ್ರ.

ಹಿಂದೊಮ್ಮೆ ಓದಿದ ಕಥೆ ನೆನಪಿಗೆ ಬರುತ್ತದೆ. ದೇವಲೋಕದಲ್ಲಿ ಇಂದ್ರನ ಸಭೆ. ಅದರಲ್ಲಿ ನೆರೆದಿದ್ದ ಋಷಿ ಮುನಿಗಳ ಎದುರು ದೇವೇಂದ್ರ ಒಂದು ಸವಾಲೊಡ್ಡಿದ, "ಸಾರ್ವಕಾಲಿಕ ಮತ್ತು ಸಾರ್ವದೈಶಿಕ ಪರಮ ಶ್ರೇಷ್ಠ ಮಾನವ ಯಾರು?"

ತುಂಬಿದ ಆ ಸಭೆಯಲ್ಲಿ ಒಮ್ಮತ ಮೂಡಲಿಲ್ಲ! ಒಬ್ಬ ಸೂಚಿಸಿದ ಹೆಸರಿನ ಬೆನ್ನಿಗೇ ನಾಲ್ವರು ಅದನ್ನು ಸಕಾರಣವಾಗಿ ವಿರೋಧಿಸುತ್ತಿದ್ದರು. "ಹಾಗಾದರೆ ಸಾಕ್ಷಾತ್ ಸೃಷ್ಟಿಕರ್ತ ಬ್ರಹ್ಮನಲ್ಲಿಗೆ ನೀವೊಂದು ನಿಯೋಗ ಒಯ್ದು ಆತನಿಂದಲೇ ಉತ್ತರ ಪಡೆಯಿರಿ" ಎಂದು ದೇವೇಂದ್ರ ಸಮಾರೋಪಿಸಿದ.

ಸತ್ಯಲೋಕಕ್ಕೆ ತೆರಳಿದ ಈ ನಿಯೋಗಕ್ಕೆ ಬ್ರಹ್ಮ ನುಡಿದ, "ಆತ ಇದ್ದಾನೆ ಹಿಮಾಲಯದ ತಪ್ಪಲಿನಲ್ಲಿ. ನೀವಲ್ಲಿಗೆ ಹೋಗಿ ಪತ್ತೆ ಮಾಡಿ."

ಋಷಿಗಳ ನಿಯೋಗ ಸುದೀರ್ಘ ಕಾಲ ಹಿಮಾಲಯ ಶ್ರೇಣಿಗಳ ಸುವಿಸ್ತಾರ ನಿರ್ಜನ ಪ್ರದೇಶಗಳಲ್ಲಿ ಅಲೆಯಿತು. ಎಲ್ಲಿಯೂ 'ಆತ' ಗೋಚರಿಸಲಿಲ್ಲ. ಆದರೆ ಬ್ರಹ್ಮ ವಾಕ್ಕು ಹುಸಿಯಾಗದಲ್ಲ? ಅನ್ವೇಷಣೆ ಮುಂದುವರಿಯಿತು.

ಅದೊಂದು ನಿರಾಶಾಮಯ ಮುಂಜಾನೆ. ಅವರು ಬೋಳು ನಿರ್ಜನ ಬಯಲಿನಲ್ಲಿ ಮೈಚೆಲ್ಲಿ ಮುಂದೇನು ಹಾದಿ ಎಂದು ಚಿಂತಾಕ್ರಾಂತರಾಗಿದ್ದಾರೆ. ಹಶು ತೃಷೆಗಳಿಂದ ಜರ್ಜರಿತರಾಗಿದ್ದಾರೆ ಕೂಡ. ಅಷ್ಟರಲ್ಲಿ ಅವರಿಗೊಂದು ಹೊಸ ನೋಟ ಗೋಚರಿಸಿದೆ: ಅತಿ ದೂರದ ಇಳಿಜಾರಿನಲ್ಲಿ ಒಬ್ಬ ವ್ಯಕ್ತಿ ಇಳಿದಿಳಿದು ಇವರತ್ತಲೇ ಧಾವಿಸಿ ಬರುತ್ತಿದ್ದಾನೆ! ಆತ ಯಾರು? ನಿಸರ್ಗದ ಶಿಶು! ನೇರ ಇವರಲ್ಲಿಗೇ ಬಂದು, "ದೂರದಿಂದಲೇ ನೋಡಿದೆ. ಪಾಪ, ಎಲ್ಲೋ ಹಾದಿ ತಪ್ಪಿ ಅಲೆಯುತ್ತಿದ್ದೀರೆಂದು ಗೊತ್ತಾಯಿತು. ನಿಮಗೆ ದಣಿವಾಗಿದೆ. ಮೊದಲು ಈ ನೀರು ಕುಡಿಯಿರಿ, ಬಳಿಕ ಹಣ್ಣು ತಿನ್ನಿ, ಮತ್ತೆ ಮಾತಾಡೋಣ" ಎನ್ನುತ್ತ ಅವರೆದುರು ನೀರು ಮತ್ತು ಆಹಾರಗಳ ಕಣಜವನ್ನೇ ಸುರುವಿದ್ದಾನೆ. ಋಷಿ ಮುನಿಗಳು ಅವನ್ನು ಯಥೇಚ್ಛವಾಗಿ ಸೇವಿಸಿ ಸಂತೃಪ್ತರಾಗಿದ್ದಾರೆ. ಆ ಗಳಿಗೆ ಅವರಿಗೆ ಅಲ್ಲಿ ಕಂಡದ್ದು ಸಾಕ್ಷಾತ್ ಸೃಷ್ಟಿಕರ್ತನ ತದ್ರೂಪ!

ಈ ಕಥೆಯ ಧ್ವನಿ ಸ್ಪಷ್ಟ: ಅಖಿಲ ಜೀವಿಗಳಲ್ಲಿ ಸದಾ ಕಾಲ ಎಲ್ಲೆಡೆಯಲ್ಲಿಯೂ ಸರ್ವಶ್ರೇಷ್ಠನಾದವ ಕೃಷಿಕ, ಎಲ್ಲರಿಗೂ ಅನ್ನ ಕೊಡುವಾತ.

ಅನ್ನ ದೇವರ ಮುಂದೆ ಇನ್ನು ದೇವರು ಉಂಟೆ?
ಅನ್ನವುಂಟಾದರುಣಲುಂಟು, ಜಗದೊಳಗೆ
ಅನ್ನವೇ ದೈವ ಸರ್ವಜ್ಞ.

* * *

ಜನಪದ ವ್ಯಕ್ತಿ

ಇಬ್ರಾಹಿಂ ಸಈದ್ ಎಂಬ ಸನ್ಮಾರ್ಗಿ

– ಎ.ಕೆ. ಕುಕ್ಕಿಲ

ಕಾಲೇಜಿನ ದಿನಗಳಲ್ಲಿ ಕಮ್ಯುನಿಸಂ ಸಿದ್ಧಾಂತದ ಗುಂಗು; ಮಾರ್ಕ್ಸ್‌ನ ಸಮಾನತೆ ಸಿದ್ಧಾಂತ ಎಲ್ಲ ಸಮಸ್ಯೆಗಳಿಗೆ ಮದ್ದೆಂಬ ವಿಶ್ವಾಸ; ಕೆಂಪುಧ್ವಜ ಅಡಿಯಲ್ಲಿ ಹೊಸತನಕ್ಕಾಗಿ ಹಾತೊರೆಯುತ್ತಿದ್ದ ಬಿಸಿರಕ್ತದ ದೇಹ. ಯೌವನದ ದಿನಗಳಲ್ಲಿ ಇಬ್ರಾಹಿಂ ಸಈದ್ ಅವರಿದ್ದುದು ಹೀಗೆ.

ಕಲಿತಿದ್ದು ಬಿ.ಕಾಂ. ಬ್ಯಾಂಕ್‌ನಲ್ಲಿ ನೌಕರಿ ದೊರೆಯಲು ಕಷ್ಟವಾಗಲಿಲ್ಲ. ಆದರೆ ನೌಕರಿ ಸಂದರ್ಭದಲ್ಲಿ ದೊರೆತ ಇಸ್ಲಾಮ್‌ನ ಸಮಗ್ರವಾದ ಮತ್ತು ಕ್ರಾಂತಿಕಾರಿ ಸ್ವರೂಪದ ಪರಿಚಯದಿಂದಾಗಿ ಆತನ ಕೆಂಪು ಕನಸು ಕಮರಿ ಹೋಯಿತು. ಬಡ್ಡಿ ಪಡೆದುಕೊಳ್ಳುವುದು, ಕೊಡುವುದು, ಲೆಕ್ಕ ಬರೆಯುವುದು, ಬಡ್ಡಿ ವ್ಯವಹಾರಕ್ಕೆ ಜಾಮೀನು ನಿಲ್ಲುವುದು ಇವೆಲ್ಲವನ್ನೂ ಸೃಷ್ಟಿಕರ್ತ ನಿಷಿದ್ಧಗೊಳಿಸಿದ್ದಾನೆ ಎನ್ನುವ ಅರಿವಿನಿಂದ ಬಡ್ಡಿಗಾಗಿ ಬರೆಯಬೇಕಾದ ಬ್ಯಾಂಕಿನ ನೌಕರಿಯನ್ನು ಬಿಟ್ಟು ರಿಕ್ಷಾ ಓಡಿಸಲು ಆರಂಭಿಸಿದರು. ಜಗತ್ತಿನ ಸಕಲ ಸಮಸ್ಯೆಗಳಿಗೂ ಇಸ್ಲಾಮ್‌ನಲ್ಲಿ ಪರಿಹಾರ ಇದೆ ಎಂದು ನಂಬಿದರು. ತಮ್ಮ ವಿಚಾರಗಳನ್ನು ಇತರರಿಗೂ ತಿಳಿಸಲು ಪತ್ರಿಕೆ ಆರಂಭಿಸಿದರು, ಊರೂರು ತಿರುಗಿದರು, ಭಾಷಣ ಮಾಡಿದರು, ಜಮಾಅತೆ ಇಸ್ಲಾಮಿ ಹಿಂದ್ ಕರ್ನಾಟಕ–ಗೋವಾ ಘಟಕಾಧ್ಯಕ್ಷರಾಗಿ ದುಡಿದರು.

ಒಂದು ವಿಶ್ವವಿದ್ಯಾಲಯ ಮಾಡಬೇಕಾದ ಕೆಲಸವನ್ನು ವ್ಯಕ್ತಿಯೊಬ್ಬರು ಮಾಡಿದರು. ಇದು ಇಬ್ರಾಹಿಂ ಅವರ ಕುರಿತು 'ಮಾನವಧರ್ಮ ಪೀಠ'ದ ವೀರಭದ್ರ ಚೆನ್ನಮಲ್ಲ ಸ್ವಾಮೀಜಿ ಹೇಳಿಕೆ. 'ಪ್ರಜಾವಾಣಿ' ವಾಚಕರಿಗಂತೂ ಇಬ್ರಾಹಿಂ ಸನ್ಮಾರ್ಗಿ ಎಂದೇ ಪರಿಚಿತರು. 'ಬಾಳಬುತ್ತಿ' ಅಂಕಣದಲ್ಲಿ 'ಸನ್ಮಾರ್ಗಿ' ಎಂಬ ಹೆಸರಿನಲ್ಲಿ ಪ್ರಕಟವಾದ ಅವರ ಚಿಂತನೆಗಳ ಹರಹು ದೊಡ್ಡದು.

೨೨ ಸ್ವತಂತ್ರ ಹಾಗೂ ೨೧ ಅನುವಾದಿತ ಕೃತಿಗಳನ್ನು ಸನ್ಮಾರ್ಗಿ ರಚಿಸಿದ್ದಾರೆ. ಒಂದು ಕೈಯಲ್ಲಿ ಖಡ್ಗ, ಇನ್ನೊಂದು ಕೈಯಲ್ಲಿ ಕುರ್‌ಆನ್ ಹಿಡಿದು ಬಂದ ಆಕ್ರಮಣಕಾರಿ ವ್ಯಕ್ತಿ ಪೈಗಂಬರ್ ಎಂಬುದಾಗಿ ದೇಶದೆಲ್ಲಡೆ ಪ್ರಚಾರ ಮಾಡುತ್ತಿದ್ದ ವೇಳೆ– 'ಪ್ರವಾದಿ ಮಹಮ್ಮದ್ ಮತ್ತು ಜೀವನ ಸಂದೇಶ' ಎಂಬ ಕೃತಿ ಬರೆದರು. ಜೆಹಾದ್‌ನ ಬಗ್ಗೆ ವ್ಯಾಪಕ ಅಪಪ್ರಚಾರವಾಗುತ್ತಿದ್ದ ವೇಳೆ 'ಜೆಹಾದ್ ಮತ್ತು ಭಯೋತ್ಪಾದನೆ' ಪುಸ್ತಕ ರಚಿಸಿದರು. 'ಸರ್ವ ಧರ್ಮ ಸಮಭಾವ', 'ಮುಸುಕಿನಲ್ಲಿ ಮುಸ್ಲಿಮ್ ಮಹಿಳೆ', 'ಕೋಮುಸೌಹಾರ್ದ ಮತ್ತು ಚಾರಿತ್ರ್ಯ

ನಿರ್ಮಾಣ', 'ತಪ್ಪು ಕಲ್ಪನೆಗಳು' ಇವರ ಕೆಲವು ಜನಪ್ರಿಯ ಪುಸ್ತಕಗಳು.

ಇಸ್ಲಾಮಿನ ಬಗ್ಗೆ ದೇಶಬಾಂಧವರಲ್ಲಿ ಇರಬಹುದಾದ ತಪ್ಪುಕಲ್ಪನೆಗಳನ್ನು ನೀಗಿಸುವ ಉದ್ದೇಶದಿಂದ ರಚಿಸಿದ 'ತಪ್ಪು ಕಲ್ಪನೆಗಳು' ಕೃತಿಯ ೩೦,೦೦೦ಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿವೆ. ಉರ್ದು ಸಾಹಿತ್ಯ ಅಕಾಡೆಮಿಯಿಂದ ೧೯೮೬ರಲ್ಲಿ ಪ್ರಕಟಿಸಲಾದ ಉರ್ದು- ಕನ್ನಡ ಶಬ್ದಕೋಶ ಸಂಪಾದನೆಯಲ್ಲಿ ಸಈದ್ ಪ್ರಮುಖ ಪಾತ್ರ ವಹಿಸಿದ್ದಾರೆ.'ಭಾರತದ ಭವಿಷ್ಯ ಮತ್ತು ಮುಸ್ಲಿಮರು', 'ಗೃಹಜ್ಯೋತಿ', 'ಬಡ್ಡಿ', 'ನಿರ್ಮಾಣ ಮತ್ತು ಸಂಹಾರ', 'ವಿವಾಹ ವಿಚ್ಛೇದನ...' ಅವರ ಕೆಲವು ಅನುವಾದಿತ ಕೃತಿಗಳು.

೧೯೮೮ ರಲ್ಲಿ ಕೋಮು ಸೌಹಾರ್ದ ಮತ್ತು ಚಾರಿತ್ರ್ಯ ನಿರ್ಮಾಣ ಸಪ್ತಾಹವನ್ನು ಕರ್ನಾಟಕ ರಾಜ್ಯ ಜಮಾಅತೆ ಇಸ್ಲಾಮಿ ಹಿಂದ್ ಆಚರಿಸಿದಾಗ ಸಈದ್ ರಾಜ್ಯಾದ್ಯಂತ ಪ್ರವಾಸ ಮಾಡಿದರು. ಕುರ್‌ಆನಿನ ಸಂದೇಶವನ್ನು ಜನರ ಮುಂದಿಡುವ ಉದ್ದೇಶದಿಂದ 'ಸಾರ್ವಜನಿಕ ಕುರ್‌ಆನ್ ಪ್ರವಚನ' ಕಾರ್ಯಾಕ್ರಮವನ್ನು ರಾಜ್ಯದ ವಿವಿಧೆಡೆ ನೀಡಿದ್ದಾರೆ. ಕಳೆದ ೩೦ವರ್ಷಗಳಿಂದ ಮಂಗಳೂರಿನಿಂದ ಪ್ರಕಾಶಿತಗೊಳ್ಳುತ್ತಿರುವ 'ಸನ್ಮಾರ್ಗ' ವಾರಪತ್ರಿಕೆಯ ಪ್ರಧಾನ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. 'ಕೋಮು ಸೌಹಾರ್ದ ಮತ್ತು ನೈತಿಕೋತ್ಥಾನ ಸಂಘ' ಎಂಬ ಸಂಘವನ್ನು ಸ್ಥಾಪಿಸಿ ಹಿಂದೂ, ಮುಸ್ಲಿಂ, ಕ್ರೈಸ್ತರನ್ನು ಅದರಲ್ಲಿ ಒಳಗೊಳಿಸಿ ತಿಂಗಳಿಗೊಂದು ಬಾರಿಯಾದರೂ ಎಲ್ಲರೊಟ್ಟಿಗೆ ಕುಳಿತು ಧರ್ಮದ ಬಗ್ಗೆ ಚರ್ಚಿಸುತ್ತಿದ್ದರು. ಪವಿತ್ರ ಕುರ್‌ಆನ್ ಅನ್ನು ಕನ್ನಡಕ್ಕೆ ಭಾಷಾಂತರಿಸುವ ಬಗ್ಗೆ ಇದ್ದ ಮಡಿವಂತಿಕೆಯನ್ನು ದಾಟಿ 'ದಿವ್ಯ ಕುರ್‌ಆನ್' ಎಂಬ ಕುರ್‌ಆನಿನ ಕನ್ನಡಾನುವಾದ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಬಳಿಕ ಪವಿತ್ರ ಕುರ್‌ಆನ್ ಮತ್ತು ದಿವ್ಯ ಕುರ್‌ಆನ್ ವ್ಯಾಖ್ಯಾನ ರಚನೆಯಲ್ಲೂ ಮುಖ್ಯ ಭೂಮಿಕೆ ನಿರ್ವಹಿಸಿದರು. ಶುಕ್ರವಾರದಂದು ಮಸೀದಿಯಲ್ಲಿ ಅರಬಿಯ ಹೊರತು ಬೇರೆ ಭಾಷೆಯಲ್ಲಿ ಖುತ್ಬಾ (ಭಾಷಣ) ಮಾಡುವುದು ನಿಶಿದ್ಧ ಎಂದು ವಾದಿಸುತ್ತಿದ್ದ ಕಾಲದಲ್ಲಿ ಬಿಜಾಪುರದ ಗ್ರಾಮೀಣ ಪ್ರದೇಶದ ಮಸೀದಿಯೊಂದರಲ್ಲಿ ಕನ್ನಡದಲ್ಲಿ ಭಾಷಣ ನೀಡಿ, ರಾಜ್ಯಾದ್ಯಂತ ಪತ್ರಿಕೆಗಳಲ್ಲೂ ಸುದ್ದಿಯಾದರು. ಇವತ್ತು ರಾಜ್ಯದ ನೂರಾರು ಮಸೀದಿಗಳು ಶುಕ್ರವಾರದಂದು ಕನ್ನಡ ಭಾಷಣಕ್ಕೆ ಒಗ್ಗಿಕೊಂಡಿವೆ.

'ಧರ್ಮ ಮನೆಯೊಳಗಿರಲಿ, ಹೊರಗೆ ಬೇಡ' ಎಂಬ ವಾದ ಪ್ರತಿಪಾದನೆಯಾಗುತ್ತಿದ್ದ ವೇಳೆ ಧರ್ಮವು ಸತ್ಯ, ನ್ಯಾಯ, ಪ್ರಾಮಾಣಿಕತೆ, ಪರೋಪಕಾರ, ಸೌಹಾರ್ದವನ್ನು ಹೇಳುತ್ತದೆಯಾದರೆ ಮತ್ತೇಕೆ ಅದು ಮನೆಯೊಳಗೆ ಇರಬೇಕು? ಸಾರ್ವಜನಿಕವಾಗಿ ಯಾಕೆ ಕಾಣಿಸಿಕೊಳ್ಳಬಾರದು? ಎಂಬುದಾಗಿ ಸಾರ್ವಜನಿಕ ವೇದಿಕೆಗಳಲ್ಲಿ ಗಟ್ಟಿಯಾಗಿ ಸಈದ್ ಪ್ರಶ್ನಿಸಿದ್ದರು. ಅವರು

ಹೇಳುವುದಿಷ್ಟು: 'ನಮ್ಮ ಪಾರ್ಲಿಮೆಂಟ್ ಇಷ್ಟು ಕೆಟ್ಟು ಹೋಗಿದ್ದರೆ ನಮ್ಮ ಸರ್ಕಾರಿ ಕಛೇರಿ ಗಬ್ಬೆದ್ದು ನಾರುತ್ತಿದ್ದರೆ ನ್ಯಾಯ ಅಪಹೃತವಾಗಿದ್ದರೆ ಅದಕ್ಕೆ ಧರ್ಮ ಅಲ್ಲಿಂದೆಲ್ಲ ಮಾಯವಾದುದೇ ಕಾರಣ. ಒಳ್ಳೆಯದು ಎಂದೂ ಮನೆಯೊಳಗೆ ಮಾತ್ರ ಇರಬೇಕಾದ್ದಲ್ಲ. ಸಾರ್ವಜನಿಕವಾಗಿ ಇರಬೇಕಾದಂಥದ್ದು.'

ಜಮಾಅತೆ ಇಸ್ಲಾಮಿಯ ರಾಜ್ಯಾಧ್ಯಕ್ಷರಾಗಿದ್ದ ಸಮಯದಲ್ಲಿ ರಾಜ್ಯದ ಬಹುತೇಕ ಮಠಗಳ ಸ್ವಾಮೀಜಿಗಳನ್ನು ಭೇಟಿಯಾಗಿದ್ದ ಸಈದ್ ಧಾರ್ಮಿಕ ಸಂವಹನವೊಂದನ್ನು ಚಾಲ್ತಿಯಲ್ಲಿಟ್ಟಿದ್ದರು. 'ಧಾರ್ಮಿಕ ಸೌಹಾರ್ದ ವೇದಿಕೆ'ಯನ್ನು ರಾಜ್ಯಮಟ್ಟದಲ್ಲಿ ಅಸ್ತಿತ್ವಕ್ಕೆ ತಂದರು. ರಾಜ್ಯದ ಪ್ರತಿ ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ನಡೆದ 'ಹೊಸ ಸಮಾಜ ನಿರ್ಮಿಸೋಣ' ಎಂಬ ಅಭಿಯಾನವನ್ನು ಆಯೋಜಿಸಿ ವಿವಿಧ ಧರ್ಮೀಯ ಮುಖಂಡರು ಅದರಲ್ಲಿ ಪಾಲ್ಗೊಳ್ಳುವಂತೆ ಮಾಡಿದರು.

ಮುಸ್ಲಿಂ ಸಮುದಾಯಕ್ಕೆ ಬರಹದ ರುಚಿಯನ್ನು ಹುಟ್ಟಿಸುವ ಉದ್ದೇಶದಿಂದ ಮುಸ್ಲಿಂ ಲೇಖಕರ ಸಂಘ ಎಂಬೊಂದು ಸಂಘಟನೆಯನ್ನು ಮಂಗಳೂರು ಕೇಂದ್ರವಾಗಿಟ್ಟು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಈಗ ಅದು ಬೆಂಗಳೂರು, ಉಡುಪಿ ಜಿಲ್ಲೆಗಳ ಸಹಿತ ತನ್ನ ಶಾಖೆಗಳನ್ನು ವೃದ್ಧಿಸಿಕೊಂಡು ಪ್ರಗತಿಯಲ್ಲಿದೆ.

ಪತ್ರಕರ್ತನಾಗಿ ಅವರದು ಸರಳ ಭಾಷೆ. 'ಸನ್ಮಾರ್ಗ' ಪತ್ರಿಕೆಯ ಭಾಷಾ ಪ್ರಯೋಗವನ್ನು ಮೆಚ್ಚಿಕೊಂಡ ಹಲವು ಸಾಹಿತಿಗಳಿದ್ದಾರೆ. ಅವರ ಇತ್ತೀಚಿನ 'ನೂರೆಂಟು ಚಿಂತನಗಳು' ಎಂಬ ಕೃತಿಗೆ ಬೆನ್ನುಡಿ ಬರೆದ ಸಾಹಿತಿ ಡಾ॥ ಯು.ಆರ್.ಅನಂತಮೂರ್ತಿ ಕೂಡ ಅವರ ಭಾಷೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬ್ಯಾಂಕ್ ಉದ್ಯೋಗಿಯಾಗಿ, ಪತ್ರಿಕೆಯ ಸಂಪಾದಕನಾಗಿ, ಪ್ರಕಾಶನ ಸಂಸ್ಥೆಯ ಅಧ್ಯಕ್ಷನಾಗಿ, ಜಮಾಅತೆ ಇಸ್ಲಾಮಿ ಹಿಂದ್‌ನ ಕರ್ನಾಟಕ-ಗೋವಾ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ್ದರೂ ಅವರೊಂದು ಸ್ವಂತ ಮನೆ ಹೊಂದಿಗಲಿಲ್ಲ. 'ಇಹಲೋಕದ ಬದುಕು ಯಾತ್ರಿಕನಂಥದ್ದು. ಕೆಲವು ದಿನಗಳ ಈ ಯಾತ್ರೆಯನ್ನು ಮುಗಿಸಿ ಶಾಶ್ವತವಾದ ಪರಲೋಕ ಬದುಕಿಗೆ ಮರಳಬೇಕಾದವರು ನಾವು' ಎಂಬ ಪೈಗಂಬರರ ಬೋಧನೆಯನ್ನು ಸದಾ ಹೇಳುತ್ತಿದ್ದರು. ನಿಧನರಾದಾಗ ಅವರ ವಯಸ್ಸು ೬೨. ಅವರ ಸಂದೇಶ ಚಿರಾಯುವಾದುದು.

ಸಾಭಾರ : ಪ್ರಜಾವಾಣಿ

* * *

ಜನಪದ ಧ್ವನಿ

ಬೆಳಗಾವಿಯಲ್ಲೇಕೆ ಪ್ರತ್ಯೇಕ ವಿಧಾನಸೌಧ?

ಕಳೆದ ೨೦೦೬ನೇ ವರ್ಷದಲ್ಲಿ ಕರ್ನಾಟಕ ಸರ್ಕಾರವು ಗಡಿನಾಡ ಪ್ರದೇಶವೆಂಬ ಕಾರಣದಿಂದ ಬೆಳಗಾವಿ ಜಿಲ್ಲೆಯ ಜಿಲ್ಲಾಕೇಂದ್ರ ಬೆಳಗಾವಿಯಲ್ಲಿ ಒಂದು ವಾರದ ವಿಧಾನ ಸಭೆಯ ಅಧಿವೇಶನವನ್ನು ಮಾಡಿದ್ದು ಇನ್ನೂ ಹಸಿರಾಗಿರುವಾಗಲೆ ಅಲ್ಲಿ ವರ್ಷದಲ್ಲಿ ಕೇವಲ ಒಂದು ವಾರ ಅಧಿವೇಶನ ನಡೆಸಲು ರಾಜ್ಯ ಸರ್ಕಾರ ೨೫೦ ಕೋಟಿ ರೂಗಳನ್ನು ವಿಧಾನಸೌಧ ಕಟ್ಟುವುದಕ್ಕಾಗಿ ವ್ಯಯಿಸುತ್ತಿರುವುದು ವ್ಯರ್ಥವಲ್ಲವೆ? ಈಗ ನಡೆಸಿರುವ ಅಧಿವೇಶನದಿಂದ ಸಾಧಿಸಿರುವುದಾದರೂ ಏನು? ಬೆಳಗಾವಿಯಲ್ಲಿ ವಿಧಾನಸೌಧದ ನಿರ್ಮಾಣದಿಂದ ಆ ಪ್ರದೇಶದ ಸಮಸ್ಯೆಗಳೆಲ್ಲವೂ ಬಗೆಹರಿಯುತ್ತವೆಯೆ? ರಾಜ್ಯ ಸರ್ಕಾರದ ಈ ದುಡುಕಿನ ಕ್ರಮವನ್ನೇ ಮುಂದಿಟ್ಟುಕೊಂಡು ಸುವರ್ಣ ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ನಾಡಿನ ಇತರೆ ಗಡಿ ಪ್ರದೇಶಗಳಾದ ಮಂಗಳೂರು, ಚಾಮರಾಜನಗರ, ಬೀದರ್, ಕಾಸರಗೋಡು ಮುಂತಾದ ಪ್ರದೇಶಗಳ ಜನತೆಯೂ ತಮ್ಮ ತಮ್ಮ ಪ್ರದೇಶದಲ್ಲೂ ವಿಧಾನ ಸೌಧಗಳನ್ನು ನಿರ್ಮಿಸಿ ಅಧಿವೇಶನಗಳನ್ನು ನಡೆಸುವಂತೆ ಬೇಡಿಕೆ ಮುಂದಿಟ್ಟು ಚಳುವಳಿಮಾಡುವುದಿಲ್ಲವೆ? ಇದೀಗ ಮುಂದುವರೆದ ವಿಜ್ಞಾನ ತಂತ್ರಜ್ಞಾನದಿಂದ ಕುಳಿತಲ್ಲೇ ಎಲ್ಲ ಮಾಹಿತಿಗಳನ್ನು ಕಲೆಹಾಕಿ ಆಡಳಿತಮಾಡಬಹುದೆಂದು ನಾಲ್ಕು ವರ್ಷಗಳ ಹಿಂದೆಯೇ ಕರ್ನಾಟಕ ಸರ್ಕಾರವೇ ಸಾಧಿಸಿ ತೋರಿಸಿಲ್ಲವೆ? ಜಿಲ್ಲಾ ಕೇಂದ್ರಗಳ ಆಡಳಿತ ಕಛೇರಿಗಳಲ್ಲಿ ಒಂದೇ ಕಡೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಮಿನಿ ವಿಧಾನಸೌಧಗಳಲ್ಲಿ ಆಡಳಿತ ನಡೆಸುತ್ತಿರುವಾಗ ಬೆಳಗಾವಿಯಲ್ಲಿ ವಿಧಾನಸೌಧದ ನಿರ್ಮಾಣ ಅನಗತ್ಯವಲ್ಲವೆ? ಈ ಬಗ್ಗೆ ಮುಖ್ಯಮಂತ್ರಿಗಳು, ಪ್ರಜ್ಞಾವಂತರೂ ಯೋಚಿಸುವರೆ? ಸರ್ಕಾರಿ ಖಜಾನೆಗಾಗುವ ದುಂದು ವೆಚ್ಚವನ್ನು ತಪ್ಪಿಸಿ ಇದೇ ಹಣವನ್ನು ಇತರೆ ಜನಪರ ಕೆಲಸಗಳಿಗೆ ಸದ್ವಿನಿಯೋಗ ಮಾಡಲಿ.

– ಸುಬ್ರಹ್ಮಣ್ಯ, ಮೇಲುಕೋಟೆ

* * *

ವಾಚಕರ ಗಮನಕ್ಕೆ :-

ಯಾವುದೇ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ವಾಚಕರ ಸೂಕ್ಷ್ಮಮತಿಯ ಪ್ರಕ್ರಿಯೆಯಾಗಿ ಈ ಅಂಕಣವಿದೆ.

ಪುಸ್ತಕ ವಿಚಾರ

ಪುಸ್ತಕದ ಹೆಸರು : ಅಧ್ಯಾಪಿಕೆಯ ಅಧ್ವಾನಗಳು
ಲೇಖಕರು : ರೋಹಿಣಿ ಬಿ.ಎಮ್
ಪ್ರಕಾಶಕರು : ಶಿಕ್ಷಕ ಸಂಗತಿ ಬಳಗ, ಮಂಗಳೂರು-೨೦
ಬೆಲೆ : ೩೦ ರೂ

ಬಿ.ಎಮ್.ರೋಹಿಣಿಯವರು ತಮ್ಮ ಕೃತಿ 'ಅಧ್ಯಾಪಕಿಯ ಅಧ್ವಾನಗಳು' ಎಂಬ ಪುಸ್ತಕದಲ್ಲಿ ಶಿಕ್ಷಕ ವೃತ್ತಿಯಲ್ಲಿನ ತಮ್ಮ ಅನುಭವಗಳನ್ನು ಸ್ವಾರಸ್ಯಕರವಾಗಿ ವಿವರಿಸಿದ್ದಾರೆ.

ಶಿಕ್ಷಕ ವೃತ್ತಿಯ ೨೦-೨೫ ವರ್ಷಗಳಲ್ಲಿ ತಾವು ಪಟ್ಟ ವರ್ಗಾವಣೆಗಳ ಪಡಿಪಾಟಲು ಆಡಳಿತ ಮಂಡಳಿಯಿಂದಾದ ತೊಂದರೆಗಳು, ಸಹೋದ್ಯೋಗಿಗಳ ಈರ್ಷ್ಯೆ ಮುಂತಾದವುಗಳನ್ನು ವಿವರಿಸಿದ್ದಾರೆ.

ಕಡೆಯ ಅಧ್ಯಾಯ 'ಭಿನ್ನ ರಾಗಗಳ ಹುಡಕಾಟದಲ್ಲಿ'-ಪ್ರತಿಯೊಬ್ಬ ಶಿಕ್ಷಕ, ಶಿಕ್ಷಕಿಯರೂ ಓದಿ ತಿಳಿಯಬೇಕಾದ ವಿಷಯಗಳನ್ನು ಬಹಳ ಸರಳವಾದ ಭಾಷೆಯಲ್ಲಿ ನಿರೂಪಿಸಿದ್ದಾರೆ.

ಒಟ್ಟಿನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹಾಗೂ ಶಿಕ್ಷಕವೃತ್ತಿಯವರಿಗೆ ಇದು ಒಂದು ಒಳ್ಳೆಯ ಮಾರ್ಗದರ್ಶಿ. ಶಿಕ್ಷಕ ವೃತ್ತಿಯ ಪ್ರಾರಂಭದಲ್ಲಿರುವವರಿಗಂತೂ ಈ ಗ್ರಂಥ ಉತ್ತಮ ಮಾರ್ಗದರ್ಶಿ. ಶಿಕ್ಷಕ ವೃತ್ತಿ ಒಂದು ಕಲೆ, ಪ್ರತಿಯೊಬ್ಬ ಶಿಕ್ಷಕ ಶಿಕ್ಷಕಿಯರದೂ ತಮ್ಮದೇ ಆದ ಒಂದು ಶೈಲಿ ಚಮತ್ಕಾರಗಳಿಂದ ಬೋಧನಾ ಮಾರ್ಗವಿರುತ್ತದೆ. ಶ್ರೀಮತಿ ರೋಹಿಣಿಯವರದು ಈ ಕ್ಷೇತ್ರದಲ್ಲಿ ಒಂದು ಯಶಸ್ವಿ ಪ್ರಯೋಗ.

ಈ ಪುಸ್ತಕ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಂದಿರುವ ಇತ್ತೀಚಿನ ಪುಸ್ತಕಗಳಲ್ಲಿ ಗಮನ ಸೆಳೆಯುವಂಥಾದ್ದಾಗಿದೆ. ಶಿಕ್ಷಣ ಕ್ಷೇತ್ರದ ಆರು ಅಂಗಗಳಾದ ವಿದ್ಯಾರ್ಥಿಗಳು, ಶಿಕ್ಷಕರು, ಆಡಳಿತ ಮಂಡಳಿಯವರು, ಪೋಷಕರು, ಸಮಾಜ ಮತ್ತು ಸರ್ಕಾರ ಇವರೆಲ್ಲರಿಗೆ ಸಂಬಂಧಿಸಿದಂತೆ ಒಂದಿಲ್ಲ ಒಂದು ವಿಚಾರ ಈ ಪುಸ್ತಕದಲ್ಲಿ ಕೆಲವೊಂದು ಸಲ ಸೂಚ್ಯವಾಗಿ, ಇನ್ನು ಕೆಲವೊಂದು ಸಲ ಸ್ಪಷ್ಟವಾಗಿ ವಾಸ್ತವಿಕ ಮಾತುಗಳು ಪ್ರಕಟವಾಗಿವೆ. ಪುಸ್ತಕದ ಭಾಷೆ ಆಕರ್ಷಣೀಯವಾಗಿದೆ. ಶಿಕ್ಷಣ ಕ್ಷೇತ್ರಕ್ಕೆ ನೇರವಾಗಿ ಸಂಬಂಧಿಸಿಲ್ಲದವರಿಗೂ ಆಕರ್ಷಕವಾಗುವಂಥ ಪುಸ್ತಕ ಇದಾಗಿದೆ.

-ಸಿ.ರಾಮಚಂದ್ರರಾವ್

* * *

ಜನಪದ ನಿಲಯದ ಅಂತರಂಗದಲ್ಲಿ ೪೪

– *ಸುರೇಂದ್ರ ಕೌಲಗಿ*



ಹೊಸ ಜೀವನ ದಾರಿ ಕೇಂದ್ರವು ಕ್ರಮೇಣ ಅನೇಕ ಪ್ರಯೋಗಗಳ ಕ್ಷೇತ್ರವಾಗುತ್ತಾ ಬಂತು. ಕೆಂದ್ರದ ಹೆಸರೆ ಸೂಚಿಸುವಂತೆ ಅಲ್ಲಿ ಜೀವನಮೌಲ್ಯಗಳಿಗೆ ಸಂಬಂಧಿಸಿದಂಥ ಹೊಸ ಜೀವನಕ್ಕೆ ದಾರಿಯನ್ನು ಆ ಕ್ಷೇತ್ರದಲ್ಲಿಯಲ್ಲದೆ ಬೇರೆಲ್ಲಿ ಪ್ರಯೋಗ ಮಾಡಲು ಸಾಧ್ಯ? ಟ್ರಸ್ಟಿನಿಂದಲೆ ಕೆಲವು ಪ್ರಯೋಗಗಳು ನಡೆದರೆ ಇನ್ನು ಕೆಲವು ಪ್ರಯೋಗಗಳು ದೇಶ ವಿದೇಶೀಯ ಸ್ವಯಂ ಸೇವಕರುಗಳಿಂದ ನಡೆದವು. ಈ ಪ್ರಯೋಗಗಳ ಕಾರಣದಿಂದಾಗಿ ಆ ಕೇಂದ್ರವು ನಿತ್ಯ ನೂತನವಾಗಿರುವಂತೆ ಪ್ರತೀತವಾಗುತ್ತಿತ್ತು. ಈ ಕೇಂದ್ರಕ್ಕೆ ಬಂದು ಹಲವಾರು ದಿನಗಳಿದ್ದು ಪ್ರಯೋಗಗಳ ಮೂಲಕ ಅನುಭವ ಪಡೆದು ಹೋದಂಥ ನೂರಾರು ಯುವಕರು ಇಂದಿಗೂ ಹೊಸ ಜೀವನ ದಾರಿ ಕೇಂದ್ರ ತಮ್ಮ ಬಾಳಿಗೆ ಹೊಸ ತಿರುವು ತಂದುಕೊಟ್ಟಿದ್ದನ್ನು ಮತ್ತು ಕೆಲ ಮೂಲಭೂತ ಮೌಲ್ಯಗಳ ಬಗ್ಗೆ ಗೌರವ ಬೆಳಸಿಕೊಂಡಿದ್ದನ್ನು ಮರೆತಿಲ್ಲ. ಇದಕ್ಕೆ ನಿದರ್ಶನವಾಗಿ ಇಂದಿಗೂ ಇಂಥ ಯುವಕರಿಂದ ಪತ್ರಗಳು ಬರುತ್ತಿರುತ್ತವೆ. ಮತ್ತು ಕೆಲವೊಮ್ಮೆ ಅವರೇ ಖುದ್ದಾಗಿ ಬರುವುದುಂಟು. ಹಾಗೆ ಬಂದಾಗ ಹೊಸ ಜೀವನ ದಾರಿ ಕೇಂದ್ರಕ್ಕೆ ಭೇಟಿಕೊಡುವುದು ಅವರ ಉದ್ದೇಶಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿರುತ್ತದೆ. ಹಾಗೆ ಅವರು ಭೇಟಿಕೊಡುವುದರ ಹಿಂದಿನ ಉದ್ದೇಶ ತಾವು ಇದ್ದು ಹೋಗಿದ್ದ ಸ್ಥಳದೊಂದಿಗೆ ಪುನಃ ಭಾವನಾತ್ಮಕ ಸಂಬಂಧವನ್ನು ಪುನಶ್ಚೇತನಗೊಳಿಸಿಕೊಳ್ಳುವುದಲ್ಲದೆ ಅಲ್ಲಿ ಆಗಿರಬಹುದಾದ ಬದಲಾವಣೆಗಳನ್ನು ನೋಡುವುದು ಕೂಡಾ ಒಂದು.

ಹೊಸ ಜೀವನ ದಾರಿ ಕೇಂದ್ರದಲ್ಲಿ ನಡೆದಂಥ ಒಂದು ಪ್ರಯೋಗ "ನಮ್ಮ ಅಂಗಡಿ"ಯದು. ಈ ಕೇಂದ್ರದ ಸುತ್ತಮುತ್ತ ಹತ್ತಿರದಲ್ಲಿ ಯಾವ ಜನವಸತಿ ಇರಲಿಲ್ಲ. ತುಂಬಾ ಹತ್ತಿರದ ಗ್ರಾಮವೆಂದರೆ ಸುಮಾರು ಒಂದೂವರೆ ಕಿ.ಮಿ. ದೂರದಲ್ಲಿಯ ಹೊಸಹಳ್ಳಿ. ಆ ಹಳ್ಳಿಯಲ್ಲಿಯೂ ಅಂಗಡಿ ಇರಲಿಲ್ಲ. ಇದ್ದರೂ ಕೂಡ ಅದು ಅಲ್ಲಿಯ ಜನರ ಅಗತ್ಯತೆಗಳನ್ನು ಪೂರೈಸುವಷ್ಟು ಸಮರ್ಥವಾಗಿರಲಿಲ್ಲ. ಆದ್ದರಿಂದ ಹೊಸ ಜೀವನದಾರಿ ಕೇಂದ್ರದಲ್ಲಿ ಒಂದು ಅಂಗಡಿಯನ್ನು ಏಕೆ ಪ್ರಾರಂಭಿಸಬಾರದೆಂಬ ವಿಚಾರ ಬಂತು. ಅಲ್ಲದೆ ಆಗ ಇಂದಿನಂತೆ ಆ ರಸ್ತೆಯಲ್ಲಿ

ಯಾವ ಬಸ್ಸುಗಳೂ ಸಂಚರಿಸುತ್ತಿರಲಿಲ್ಲ. ನಾರಾಯಣಪುರ, ಹೊಸಹಳ್ಳಿ ಗ್ರಾಮಗಳಿಂದ ಮೇಲುಕೋಟೆಗೆ ಹೋಗುವಾಗ ಮತ್ತು ಅವರು ಪುನಃ ಹಿಂದಿರುಗುವಾಗ ಹೊಸ ಜೀವನ ದಾರಿ ಕೇಂದ್ರದ ಮುಂಭಾಗದಿಂದಲೇ ಹೋಗಬೇಕಾಗುತ್ತಿತ್ತು. ಆವರಿಗೂ ಕಡ್ಲೆಪುರಿ, ಬೀಡಿ–ಬೆಂಕಿ ಪೊಟ್ಟಣ, ಖಾರದ ತಿಂಡಿಗಳು ಮುಂತಾದವುಗಳು ಬೇಕಾಗುತ್ತಿದ್ದವು. ಇದೆಲ್ಲವನ್ನು ಗಮನಿಸಿ ಒಂದು ಪುಟ್ಟ ಚಿಲ್ಲರೆ ಸಾಮಾನುಗಳ ಅಂಗಡಿಯೊಂದನ್ನು ಪ್ರಾರಂಭಿಸಲಾಯಿತು. ಈ ಅಂಗಡಿಯಲ್ಲಿ ಕುಳಿತು ವ್ಯಾಪಾರ ಮಾಡುವುದಕ್ಕೆ ಬೇಕಾದ ಸೂಕ್ತ ವ್ಯಕ್ತಿಯನ್ನು ಹುಡುಕಾಡುವ ಅಗತ್ಯವೆ ಇರಲಿಲ್ಲ. ಏಕೆಂದರೆ ಹೊಸ ಜೀವನ ದಾರಿ ಕೇಂದ್ರದ ಅಂಗವಿಕಲರ ನಿವಾಸಿಗಳಲ್ಲಿ ಹನುಮಂತನೂ ಕೂಡ ಒಬ್ಬನಾಗಿದ್ದ. ಅವನ ಎರಡೂ ಕಾಲುಗಳಲ್ಲಿ ಶಕ್ತಿ ಇಲ್ಲದ್ದರಿಂದ ಮತ್ತು ಕೈಗಳೂ ಕೂಡ ದುರ್ಬಲವಾಗಿದ್ದರಿಂದ ಅವನು ಹೆಚ್ಚಾಗಿ ಕುಳಿತುಕೊಂಡೇ ಇರುತ್ತಿದ್ದ. ಅವನಿಗೂ ಸಮಯ ಕಳೆಯುವುದಕ್ಕೆ ಒಂದು ಮಾರ್ಗ ಅಗತ್ಯವಾಗಿತ್ತು. ಆದ್ದರಿಂದ ಒಂದು ರೀತಿಯಲ್ಲಿ ಹನುಮಂತನ ಬೌದ್ಧಿಕ ಶಕ್ತಿಯನ್ನು ಚುರುಕಾಗಿಡುವುದಕ್ಕೆ ಮತ್ತು ಅವನಿಗೆ ಸಮಯದ ಭಾರ ಅನಿಸದಿರುವಂತೆ ಮಾಡುವುದಕ್ಕೆ 'ನಮ್ಮ ಅಂಗಡಿ'ಯ ಯೋಚನೆ ಬಹಳ ಅನುಕೂಲಕರವಾಗಿ ಒದಗಿ ಬಂತು. ಅಂಗಡಿ ನಡೆಸುವ ಜವಾಬ್ದಾರಿಯನ್ನು ಹನುಮಂತ ಸಂತೋಷವಾಗಿ ತೆಗೆದುಕೊಂಡ. ಅಂಗಡಿಗೆ ಏನೆಂದು ಹೆಸರಿಡಬೇಕೆಂದು ಯೋಚಿಸಿದಾಗ ಈ ಅಂಗಡಿ ಎಲ್ಲರಿಗೂ ತಮ್ಮದೆನಿಸುವಂಥ ಹೆಸರಿಡಬೇಕೆಂದೆನಿಸಿತು. ಅದರ ಫಲವಾಗಿ ಆ ಅಂಗಡಿಗೆ 'ನಮ್ಮ ಅಂಗಡಿ' ಎಂದು ನಾಮಕರಣವಾಯಿತು. ಅಂಗಡಿ ಎಂದ ಮೇಲೆ ಮುಖ್ಯವಾಗಿ ಬೇಕಾದ ತಕ್ಕಡಿ–ತೂಕದ ಬಟ್ಟುಗಳು ಇತ್ಯಾದಿಗಳನ್ನು ಖರೀದಿಸಿ ತರಲಾಯಿತು ಆದರೆ ಪದಾರ್ಥಗಳನ್ನಿಡಲು ಅಲ್ಲಿಯೆ ಇದ್ದ ಹಳೆಯ ಮರದ ಬೀರನ್ನು ಉಪಯೋಗಕ್ಕೆ ತರಲಾಯಿತು. ಆದರೆ ಆ ಬೀರುವಿಗೆ ಒಂದೇ ಬಾಗಿಲಿತ್ತು. ಒಳಗೆ ಕೆಲವು ಹಂತಗಳಿದ್ದವು ಅದರ ಮೇಲೆಯೆ ಕೆಲವು ಪ್ಲಾಸ್ಟಿಕ್ ಸೀಸಗಳಲ್ಲಿ ವಿವಿಧ ಬಗೆಯ ತಿಂಡಿಗಳನ್ನು ತುಂಬಿ ಜೋಡಿಸಿಡಲಾಯಿತು. ಹನುಮಂತನಿಗೆ ವ್ಯಾಪಾರ ಮಾಡಲು ಅನುಕೂಲವಾಗಲೆಂದು ಅವನು ತನ್ನ ಎರಡೂ ಕಾಲುಗಳನ್ನು ಅಗಲವಾಗಿ ಮಡಚಿಕೊಂಡು ಕುಳಿತುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಒಂದು ಕುಳ್ಳನೆಯ ಅಗಲವಾದ ಮರದ ಬೆಂಚನ್ನು ಇಡಲಾಯಿತು. ಇದನ್ನು ಅಂಗಡಿಯ ಬಾಗಿಲಿಗೆ ಹೊಂದಿಕೊಂಡಂತೆ ಇಡಲಾಯಿತು. ಹೊಸ ಜೀವನ ದಾರಿ ಕೇಂದ್ರದ ಅಕ್ಕ–ಪಕ್ಕ ಇಂದಿನಷ್ಟು ವ್ಯವಸಾಯ ಇರಲಿಲ್ಲವಾದ್ದರಿಂದ ಖಾಲಿ ಬಿದ್ದಿದ್ದ ಹೊಲಗಳಲ್ಲಿ ಹೊಸಹಳ್ಳಿಯ ಜನರು ಕುರಿ ಮತ್ತು ದನಗಳನ್ನು ತಂದು ಮೇಯಿಸುತ್ತಿದ್ದರು. ಅವರಿಗೆ ನಮ್ಮೀ ಅಂಗಡಿಯು ತುಂಬಾ ಉಪಯೋಗಕರವಾಯಿತು. ಈ ಅಂಗಡಿಯ ಕಾರಣದಿಂದಾಗಿ ಹನುಮಂತನಿಗೆ ಅಕ್ಕಪಕ್ಕದ ಹಳ್ಳಿಯ ಜನರ ನಿಕಟ

ಪರಿಚಯವಾಯಿತಲ್ಲದೆ ಅನೇಕ ಜನರ ಹೆಸರುಗಳು ಬಾಯಿಪಾಠವಾದವು. ಹೊಸ ಜೀವನ ದಾರಿ ಕೇಂದ್ರಕ್ಕೆ ಯಾವುದೇ ಒಬ್ಬ ವ್ಯಕ್ತಿಯ ಮಾಹಿತಿ ಬೇಕಿದ್ದರೆ ಅದು ಹನುಮಂತನಿಂದ ಸಿಗುತ್ತಿತ್ತು. ಅವನ ಸ್ಮರಣ ಶಕ್ತಿ ತೀಕ್ಷ್ಣವಾಗಿತ್ತು. ಹೀಗೆ ಪ್ರಾರಂಭವಾದ 'ನಮ್ಮ ಅಂಗಡಿ' ಕ್ರಮೇಣ ಗ್ರಾಹಕರ ಒತ್ತಾಯದ ಮೇರೆಗೆ ಮತ್ತು ಅಂಗಡಿಯನ್ನು ಬೆಳಸಬೇಕೆಂಬ ದೃಷ್ಟಿಯಿಂದ ಅದನ್ನು ಅಭಿವೃದ್ಧಿಪಡಿಸುವ ಯೋಚನೆ ಮಾಡಲಾಯಿತು. ಈ ಅಭಿವೃದ್ಧಿ ಯೋಜನೆಯ ಅಂಗವಾಗಿ ನಮ್ಮ ಅಂಗಡಿಯನ್ನು ಒಂದು ನ್ಯಾಯಬೆಲೆ ಅಂಗಡಿಯೆಂದಾಗಿ ತಾಲ್ಲೂಕು ಆಹಾರ ಇಲಾಖೆಯವರಿಂದ ಮಾನ್ಯತೆಯನ್ನು ಪಡೆಯಲಾಯಿತು. ಹೊಸಹಳ್ಳಿಯಲ್ಲಿಯ ಜನರಿಗೆ ವಿತರಿಸಲಾಗಿದ್ದ ಪಡಿತರ ಚೀಟಿ ಹೊಂದಿದ್ದವರು ನಮ್ಮ ಅಂಗಡಿಗೆ ಬರಬೇಕಾಗುತ್ತಿತ್ತು. ಮುಂದೆ ಆಹಾರಧಾನ್ಯಗಳಲ್ಲದೆ ಸೀಮೆಣ್ಣೆ ಮಾರುವುದಕ್ಕೂ ನ್ಯಾಯಬೆಲೆ ಬಟ್ಟೆಯನ್ನು ಮಾರುವುದಕ್ಕೂ ಅನುಮತಿಯನ್ನು ಪಡೆಯಲಾಯಿತು. ಅಂಗಡಿಗೆ ಬೇಕಾಗುತ್ತಿದ್ದ ವಿವಿಧ ಬಗೆಯ ತಿಂಡಿಗಳನ್ನು ಮೈಸೂರಿನಿಂದ ತಂದುಕೊಡಲಾಗುತ್ತಿತ್ತು. ವ್ಯಾಪಾರದಲ್ಲಿ ಲಾಭಾಂಶ ಕಡಿಮೆ ಇದ್ದುದರಿಂದ ಮೈಸೂರಿನಿಂದ ತರಲಾಗುತ್ತಿದ್ದ ಪದಾರ್ಥಗಳ ಸಾಗಾಣಿಕೆಯ ಖರ್ಚನ್ನು ಬಹಳ ಮಿತಗೊಳಿಸಲಾಗುತ್ತಿತ್ತು. ಹನುಮಂತನ ಈ ಅಂಗಡಿಗೆ ವ್ಯಾಪಾರದ ಯಾವ ಸಮಯವೂ ಇರಲಿಲ್ಲ. ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಅವನ ವ್ಯಾಪಾರದ ಸಮಯವಾಗಿತ್ತು. ಅವನ ಅಂ ಗಡಿಯ ಸ್ಥಳ ವಿವಿದೋದ್ದೇಶದ್ದಾಗಿತ್ತು. ಮುಂಭಾಗದಲ್ಲಿ ಅಂಗಡಿ ಇದ್ದರೆ ಹಿಂಭಾಗದ ಸ್ವಲ್ಪ ದೂರದಲ್ಲಿ ಸ್ನಾನದ ಮನೆಯಿತ್ತು. ಅದೇ ಮನೆಯಲ್ಲಿ ಒಂದು ಪಕ್ಕಕ್ಕೆ ಅಡುಗೆ ಮನೆಯಿತ್ತು. ಆಗ ಹೊಸ ಜೀವನ ದಾರಿಯಲ್ಲಿದ್ದ ಎಲ್ಲ ಮೂಲನಿವಾಸಿಗಳು ಆ ಅಂಗಡಿಯ ಮನೆಯಲ್ಲಿ ಅಡುಗೆಮಾಡಿ, ಊಟ ಮಾಡಿ ಮಲಗುವುದು ಮಾಡುತ್ತಿದ್ದರು. ಮಣ್ಣಿನ ನೆಲ, ನಾಡಹೆಂಚು, ಮಣ್ಣಿನ ಗೋಡೆಗಳನ್ನೊಳಗೊಂಡ ರಚನೆಯಾಗಿತ್ತು ಈ ಮನೆ. ಕೆಲವೊಮ್ಮೆ ಅಂಗಡಿಯ ವ್ಯಾಪಾರ ಹೆಚ್ಚಾದರೆ ಕೆಲವೊಮ್ಮೆ ಕಡಿಮೆಯಾಗಿರುತ್ತಿತ್ತು. ಆಗಾಗ್ಗೆ ಟ್ರಸ್ಟಿಗೆ ಭೇಟಿಕೊಡಲು ಬರುತ್ತಿದ್ದ ಸಂದರ್ಶಕರು ಹೊಸ ಜೀವನ ದಾರಿಗೂ ಹೋಗುತ್ತಿದ್ದರು. ನಗರಗಳಿಂದ ಬರುತ್ತಿದ್ದ ಇವರಿಗೆ ಒಂದು ನಿರ್ಜನವಾದ ಪ್ರದೇಶದಲ್ಲಿ ಬಹಳ ಸಾಮಾನ್ಯವಾದಂಥ ಅಂಗಡಿಯೊಂದನ್ನು ಒಬ್ಬ ಅಂಗವಿಕಲ ಯುವಕ ನಡೆಸುತ್ತಿದ್ದುದನ್ನು ತಿಳಿದು ಮತ್ತು ನೋಡಿ ಖುಷಿಪಟ್ಟು ಹನುಮಂತನ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದರು. ಆ ದಿನ ವ್ಯಾಪಾರದ ಪ್ರಮಾಣ ಹೆಚ್ಚಾಗಿ ಹನುಮಂತನ ಜೇಬು ಹಣದಿಂದ ತುಂಬಿರುತ್ತಿತ್ತು. ಆಗ ಅವನ ಮುಖ ಪ್ರಫುಲ್ಲವಾಗಿರುತ್ತಿತ್ತು. ಆದರೆ ಹನುಮಂತನದು ತುಂಬಾ ಸ್ನೇಹದ ಸ್ವಭಾವವಾದುದರಿಂದ ಅಲ್ಲಿಗೆ ಬರುವ ಹಳ್ಳಿಗರು ಅವನೊಂದಿಗೆ ಹೆಚ್ಚು ಸಲುಗೆ

ಬೆಳಸಿಕೊಂಡು ಸಾಲದ ವ್ಯಾಪಾರ ಮಾಡಿದ್ದೂ ಉಂಟು. ಅಂಥ ಸಾಲ ವಸೂಲಾಗದೆ ಹನುಮಂತ ಅವರೊಂದಿಗೆ ಜಗಳವಾಡಿದ್ದೂ ಉಂಟು. ಹೀಗೆ ವ್ಯಾಪಾರದ ದಿನಗಳು ಉರುಳುತ್ತಿರಲಾಗಿ ಹನುಮಂತನಿಗೆ ತನ್ನ ಅಂಗಡಿಯ ವ್ಯಾಪಾರವನ್ನು ಹೆಚ್ಚಿಸಿಕೊಳ್ಳುವ ಬಗ್ಗೆ ಒಂದು ವಿಶಿಷ್ಟವಾದ ವಿಚಾರ ಹೊಳೆಯಿತು. ಅದು ಅವನ ವಿಚಾರ ಎಂಬುವುದಕ್ಕಿಂತ ಹೆಚ್ಚಾಗಿ ಅಂಗಡಿಗೆ ಬರುತ್ತಿದ್ದ ಹಳ್ಳಿಗರ ಒತ್ತಾಯವೆಂದು ಹೇಳಿದರೆ ತಪ್ಪಾಗಲಾರದು. ಅವರ ಪ್ರಕಾರ ಅಂಗಡಿಯ ವ್ಯಾಪಾರ ಹೆಚ್ಚಾಗಬೇಕಾದರೆ ಆ ಅಂಗಡಿಯಲ್ಲಿ ಬೀಡಿ ಮತ್ತು ಸಿಗರೇಟನ್ನು ಇಟ್ಟು ವ್ಯಾಪಾರ ಮಾಡಬೇಕೆಂಬುದಾಗಿತ್ತು. ಈ ವಿಚಾರ ಸಹಜವಾಗಿಯೇ ಹನುಮಂತನಲ್ಲಿ ಉತ್ಸಾಹ ಮೂಡಿಸಿತು. ಅದಕ್ಕಾಗಿ ಅವನು 'ನಮ್ಮ ಅಂಗಡಿ'ಯಲ್ಲಿ ಬೀಡಿ ಮತ್ತು ಸಿಗರೇಟುಗಳನ್ನು ಮಾರಲು ಅನುಮತಿಯನ್ನು ಕೇಳಲು ಪ್ರಾರಂಭಿಸಿದ. ವ್ಯವಹಾರಿಕವಾಗಿಯೇನೋ ಈ ಸಲಹೆ ಸೂಕ್ತವೇ ಆಗಿತ್ತು. ಆದರೆ ಹೊಸ ಜೀವನ ದಾರಿಯಂಥ ಮೌಲ್ಯಾಧಾರಿತ ಕೇಂದ್ರದಲ್ಲಿ ಹಣದ ಲಾಭಕ್ಕಾಗಿ ಬೀಡಿ, ಸಿಗರೇಟು ಮಾರುವುದು ಎಷ್ಟು ಸರಿ? ಎಂಬ ತರ್ಕವೂ ಸಹ ಎದುರಿಗೆ ಬಂತು. ಈ ವಿಚಾರವನ್ನು ಹನುಮಂತನಿಗೆ ಮನದಟ್ಟು ಮಾಡುವುದು ಕಷ್ಟವೇ ಆಯಿತು. ಬೀಡಿ, ಸಿಗರೇಟು ಇಲ್ಲದ್ದು ಅಂಗಡಿಯೇ ಅಲ್ಲ ಎಂಬ ಅಭಿಪ್ರಾಯಕ್ಕೆ ಅವನು ಬಂದಿದ್ದ. ಆದರೂ ಕೂಡ ಬಹಳಷ್ಟು ಚರ್ಚೆಯ ನಂತರ ಅವನನ್ನು ಈ ಅಭಿಪ್ರಾಯದಿಂದ ಬಿಡುಗಡೆ ಮಾಡಲಾಯಿತು. ಮುಂದೆ 'ನಮ್ಮ ಅಂಗಡಿ' ಕೆಲವು ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಸಮಾಜಮುಖಿಯಾದ ಅಂಗಡಿಯಾಯಿತು. (ಮುಂದುವರೆಯುವುದು ......)

ಸಂತಾಪ

ಸ್ವತಂತ್ರ ವಿಚಾರಧಾರೆಯ ಮತ್ತು ಮಾನವೀಯ ಮೌಲ್ಯಗಳ ಪ್ರತಿಪಾದಕರು ಹಾಗೂ ಸದಾ ಆರೋಗ್ಯಪೂರ್ಣ ಸಮಾಜದ ಹಿತಚಿಂತನೆಯಲ್ಲಿ ಹಾಗೂ ಚಳುವಳಿಗಳಲ್ಲಿ ತಮ್ಮನ್ನು ಹಲವಾರು ವರ್ಷಗಳಿಂದ ತೊಡಗಿಸಿಕೊಂಡಿದ್ದ ಪ್ರೊ.ಕೆ.ರಾಮದಾಸ್‌ರವರು ತಮ್ಮ ೬೬ನೇ ವಯಸ್ಸಿನಲ್ಲಿ ದಿನಾಂಕ ೧೯-೬-೨೦೦೭ರಂದು ತೀರಿಕೊಂಡರು. ಅವರ ನಿಧನದಿಂದ ಕರ್ನಾಟಕದ ವೈಚಾರಿಕ ಜಗತ್ತು ಓರ್ವ ವಿಶಿಷ್ಟ ಚಿಂತಕನನ್ನು ಕಳೆದುಕೊಂಡಂತಾಗಿದೆ. ಪ್ರೊ.ರಾಮದಾಸ್‌ರವರ ಆತ್ಮಕ್ಕೆ ಜನಪದ ವಿಚಾರ ಶಾಂತಿಯನ್ನು ಪ್ರಾರ್ಥಿಸುತ್ತದೆ.

ಜನಪದ ಧ್ವನಿ

ಜನಪದ ಧ್ವನಿ ಎಂಬ ಶೀರ್ಷಿಕೆಯಡಿಯಲ್ಲಿ ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಪ್ರಚಲಿತ ವಿದ್ಯಮಾನಗಳ ಬಗ್ಗೆ ನಿಮ್ಮ ಅನಿಸಿಕೆ ಅಥವಾ ಪ್ರತಿಕ್ರಿಯೆಗಳನ್ನು ೧೫ ವಾಕ್ಯಗಳಿಗೆ ಸೀಮಿತಗೊಳಿಸಿ ಬರೆದು ಕಳುಹಿಸಿದಲ್ಲಿ ಅದನ್ನು ಪ್ರಕಟಿಸಲಾಗುವುದು.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ (–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya - 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com